ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಕಲ್ಯಾಣ ಕಿರಣ

ಆಗಸ್ಟ್ 2016

ಶರಣರ ನಡೆ ಮುಕ್ತಿಯ ಕಡೆ








ಬೆಂಗಳೂರಿನಲ್ಲಿ ಬಸವ ಪಂಚಮಿ

ಸುಮಧುರ ಕ್ಷಣಗಳು



ಉಸುರಿನ ಪರಿಮಳವಿರಲು
ಕುಸುಮದ ಹಂಗೇತಕಯ್ಯಾ?
ಕ್ಷಮೆ ದಮೆ ಶಾಂತಿ ಸೈರಣೆಯಿರಲು
ಸಮಾಧಿಯ ಹಂಗೇತಕಯ್ಯಾ?
ಲೋಕವೆ ತಾನಾದ ಬಳಿಕ ಏಕಾಂತದ
ಹಂಗೇತಕಯ್ಯಾ
ಚೆನ್ನಮಲ್ಲಿಕಾರ್ಜುನ ದೇವರ ದೇವಾ.

– ಮಹಾನ್ ಶರಣೆ ಅಕ್ಕ ಮಹಾದೇವಿ

ಸೆಪ್ಟೆಂಬರ್

ಹಬ್ಬ, ಹುಣ್ಣಿಮೆಗಳು

ಸೆ.5–ಪೂಜ್ಯಶ್ರೀ ಲಿಂಗಾನಂದ ಸ್ವಾಮೀಜಿ ಜಯಂತಿ.
ರಾಷ್ಟ್ರೀಯ ಬಸವದಳ ಹುಟ್ಟುಹಬ್ಬ.
ಪೂಜ್ಯಶ್ರೀ ಮಾತೆ ಗಂಗಾದೇವಿ ಅವರ ವರ್ಧಂತಿ.
ಶ್ರಾವಣ ಮಾಸ ಬಸವಜ್ಯೋತಿ ಸಮಾರೋಪ.

ಸಂಪಾದಕೀಯ
ಪೂಜ್ಯ ಶ್ರೀ ಡಾ. ಮಾತೆ ಮಹಾದೇವಿ.
ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ.
ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿ.
ಅಕ್ಷರ ಜೋಡಣೆ
ಬಸವ ಚಂದ್ರಿಕಾ
ಪುಟ ವಿನ್ಯಾಸ
ಪುನೀತ್.ಎಂ.ಜಿ.
ಪ್ರಸಾರ ಮೇಲ್ವಿಚಾರಣೆ
ಆರ್.ಎಸ್.ಹೊನ್ನಪ್ಪನವರ್

ಒಂದು ಪ್ರತಿಗೆ: 20 ರೂಪಾಯಿ
ಪಂಚವಾರ್ಷಿಕ ಸದಸ್ಯತ್ವ : 1000 ರೂಪಾಯಿ
ವಾರ್ಷಿಕ ಚಂದಾ : 200 ರೂಪಾಯಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಸಂಪುಟ – 47 ಬಸವ ಶಕೆ 882
ಸಂಚಿಕೆ – 08 ಆಗಸ್ಟ್ 2016




Kalyana Kirana-R.No.19988/70. Monthly Magzine Edited and published by Pujya kasthuridevi on behalf of Vishva Kalyana Mission chratible trust, Basava Mantapa, 2035, 20th main, 2nd block, Rajajinagar Bangalore -560010.

Ph: 080-23131476. SMS-9945806297.
E-mail: kalyanakirana1970@gmail.com

ಸಂಪಾದಕರ ನುಡಿ

ಮಾತಾಜಿ



ಶ್ರಾವಣ ಮಾಸದ "ಬಸವ ಜ್ಯೋತಿ" ಮಹತ್ವ

ಮನುಕುಲದ ಇತಿಹಾಸದ ಪುಟವನ್ನು ತಿರುವಿ ನೋಡಿದಾಗ ನಮ್ಮ ಭಾರತ ದೇಶದಲ್ಲಿ ಆಗಾಗ ಮಹಾ ಪುರುಷರು ದೇವನ ಆಜ್ಞೆಯಂತೆ ಅವತರಿಸಿದ್ದಾರೆ. ತಮ್ಮ ಅಮೂಲ್ಯವಾದ ಸೂಕ್ತ ಸಂದೇಶಗಳನ್ನು ತಾವು ಆಚರಿಸುವುದರೊಂದಿಗೆ ಸರ್ವರಿಗೂ ಶಾಂತಿ ಸಮಾಧಾನ ನೆಮ್ಮದಿಯಿಂದ ಜೀವನ ನಡೆಸಲು-ನಡೆಯಲು ಮಾರ್ಗದರ್ಶನ ಮಾಡಿದ್ದಾರೆ, ಮಾಡುತ್ತಿದ್ದಾರೆ. ವಿಶ್ವಗುರು ಬಸವಣ್ಣನವರು ಈ ಇಳೆಗೆ ದೇವನ ಕರೆಯಂತೆ 1134 ರಲ್ಲಿ ಅವತರಿಸಿ ಬಂದ ಮಣಿಹವನ್ನು ಪೂರೈಸಿ 1196 ಶ್ರಾವಣ ಶುದ್ಧ ಪಂಚಮಿಯಂದು ಉರಿಯುಂಡ ಕರ್ಪೂರದಂತೆ ಲಿಂಗದೇವನಲ್ಲಿ ಒಡವೆರದು ಒಂದಾದರು. ಅಂದಿನಿಂದ ಇಂದಿನವರೆಗೆ ಆ ದಿನವು "ಬಸವ ಪಂಚಮಿ" ಎಂದು ಖ್ಯಾತವೆತ್ತಿದೆ. ಈ ಶ್ರಾವಣ ಮಾಸದಲ್ಲಿಯೇ ಗುರು ಬಸವಣ್ಣನವರು ಲಿಂಗೈಕ್ಯರಾಗಿದ್ದು. ಭಾರತ ದೇಶದಲ್ಲೆಲ್ಲ ಪವಿತ್ರ ಮಾಸ, ಶ್ರಾವಣ ಮಾಸದಲ್ಲಿ ಪ್ರವಚನ ಕೀರ್ತನಗಳು ವಿಶೇಷ ಪೂಜೆಗಳು ಜರಗುತ್ತವೆ.

ಪರಮಪೂಜ್ಯ ಶ್ರೀ.ಮನ್ ನಿರಂಜನ ಮಹಾ ಜಗದ್ಗುರು ಲಿಂ. ಲಿಂಗಾನಂದ ಮಹಾಸ್ವಾಮೀಜಿ, ನಾವುಗಳು ಮತ್ತು ನಮ್ಮ ಜಂಗಮಮೂರ್ತಿಗಳು ನಿರಂತರ ವಿಶ್ವಧರ್ಮ ಪ್ರವಚನದ ಮುಖಾಂತರ ಕರ್ನಾಟಕದ ತುಂಬ, ಮಹಾರಾಷ್ಟ್ರ, ಆಂಧ್ರ, ತೆಲಂಗಾಣ, ಗೋವಾ, ದೆಹಲಿ, ಕೇರಳ ಇದಲ್ಲದೆ ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್‌ದಂತಹ ಹೊರದೇಶಗಳಲ್ಲಿ ಧರ್ಮ ಪ್ರಚಾರ ಮಾಡಿ ಕಲ್ಯಾಣ ರಾಜ್ಯದ ಪರಿಕಲ್ಪನೆಯ ತತ್ವಸಿದ್ಧಾಂತಗಳನ್ನು ಜನ-ಮನಕ್ಕೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದೇವೆ.

ಇದರ ಜೊತೆ ಜೊತೆಯಾಗಿ ಬಸವ ಧರ್ಮದ ಜಂಗಮ ಮೂರ್ತಿಗಳು, ಲಿಂಗಾಯತ ಧರ್ಮ ಮಹಾಸಭಾ, ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ಮಹಿಳಾ ಗಣ ಮತ್ತು ರಾಷ್ಟ್ರೀಯ ಬಸವ ದಳಗಳ ಸದಸ್ಯರುಗಳೊಂದಿಗೆ ಬಸವ ಧರ್ಮ ಸಮ್ಮೇಳನ, ಲಿಂಗಾಯತ ಧರ್ಮ ಸಮ್ಮೇಳನಗಳನ್ನು ತಮಿಳುನಾಡಿನ ಕಾವೇರಿ ಡ್ಯಾಮ್‌ಸೈಟ್, ಹೈದರಾಬಾದ, ಬೆಂಗಳೂರು, ಧಾರವಾಡ, ದೆಹಲಿ ಕೆಂಪುಕೋಟೆ, ಬೆಳಗಾವಿ ಜಿಲ್ಲೆಯ ಗೋಕಾಕ್, ಮುಂಬಯಿ, ಈಚಲಕರಂಜಿ, ದೆಹಲಿ ಮಹಾವೀರ ವಾಟಿಕಾದಲ್ಲಿ, ಚನ್ನೈ, ಪೂನಾಗಳಲ್ಲಿ ನಡೆಸುವುದರೊಂದಿಗೆ ಧರ್ಮ ಜಾಗೃತಿ ಗೈಲಾಗಿದೆ. ಇದಕ್ಕೆ ಪೂರಕವಾಗಿ ಕೂಡಲ ಸಂಗಮದಲ್ಲಿ ಶರಣ ಮೇಳ, ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ, ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ

ಲಿಂಗಾಯತ ಗಣಮೇಳ, ಧಾರವಾಡದಲ್ಲಿ ಶರಣೋತ್ಸವ, ಬೆಂಗಳೂರಿನ ಬಸವ ಗಂಗೋತ್ರಿ (ಕುಂಬಳಗೋಡು)ಯಲ್ಲಿ ಬಸವೋತ್ಸವ, ಬಸವ ಜಯಂತಿ. ಬಸವ ಪಂಚಮಿ (ಲಿಂಗೈಕ್ಯ ಸಂಸ್ಮರಣೆ) ಶಿವರಾತ್ರಿಯಂದು ಗಣಮೇಳ, ವಾರಕ್ಕೊಮ್ಮೆ ತಪ್ಪದೇ ಬಸವ ಮಂಟಪದಲ್ಲಿ ಶರಣ ಸಂಗಮ-ಸಾಮೂಹಿಕ ಪ್ರಾರ್ಥನೆ. ಅಂತರ್ ಜಾತಿ, ಅಂತರ್ ವರ್ಣೀಯ ವಿವಾಹಗಳನ್ನು ಮಾಡುವುದರೊಂದಿಗೆ, ಬಸವಾಯತ ದೀಕ್ಷೆ, ಇಷ್ಟಲಿಂಗ ದೀಕ್ಷೆ, ಕ್ರಿಯಾ ಮೂರ್ತಿ ದೀಕ್ಷೆಯ ಸಂಸ್ಕಾರವನ್ನು ಕೊಡುತ್ತಿದ್ದೇವೆ.

ವರ್ಷದಲ್ಲಿ ಒಂದು ತಿಂಗಳು ಇದೇ ಶ್ರಾವಣ ಮಾಸದಲ್ಲಿ ಮನೆ-ಮನೆಗೆ ಹೋಗಿ, ಬಸವ ಪೂಜೆ, ಇಷ್ಟಲಿಂಗ ಪೂಜೆ, ಧರ್ಮ ಧ್ವಜಾರೋಹಣ, ಅನುಭಾವ ಗೋಷ್ಠಿಗಳನ್ನು ಮಾಡುವುದರೊಂದಿಗೆ "ಬಸವ ಜ್ಯೋತಿ" ಕಾರ್ಯಕ್ರಮಗಳನ್ನು ಏರ್ಪಡಿಸಿ ಮನಃಪರಿವರ್ತನೆ, ಮನೆಯ ಕುಟುಂಬದವರ, ಸುತ್ತಮುತ್ತಲಿನ ಜನರ ಪರಿವರ್ತನೆ ಮಾಡುತ್ತಲಿದ್ದಾವೆ.

'ಜ್ಞಾನದ ಬಲದಿಂದ
ಅಜ್ಞಾನದ ಕೇಡು ನೋಡಯ್ಯಾ
ಜ್ಯೋತಿಯ ಬಲದಿಂದ
ತಮಂಧದ ಕೇಡು ನೋಡಯ್ಯಾ
ಪರುಷದ ಬಲದಿಂದ
ಅವಲೋಹದ ಕೇಡು ನೋಡಯ್ಯಾ
ಸತ್ಯದ ಬಲದಿಂದ
ಅಸತ್ಯದ ಕೇಡು ನೋಡಯ್ಯಾ
ಲಿಂಗದೇವನ ಶರಣರ ಅನುಭಾವದಿಂದ
ಎನ್ನ ಭವದ ಕೇಡು ನೋಡಯ್ಯಾ'

ಎಂಬ ಗುರು ಬಸವಣ್ಣನವರ ವಾಣಿಯನ್ನು ಸಾರ್ಥಕಪಡಿಸಿಕೊಳ್ಳಲು ಹಾಗೂ ಲೌಕಿಕ, ಪಾರಮಾರ್ಥಿಕ ಸತ್ ಸಂಕಲ್ಪಗಳನ್ನು ಪೂರೈಸಿಕೊಳ್ಳಲು ಸಹಾಯಕವಾಗುವುದೇ ಬಸವ ಜ್ಯೋತಿ ಕಾರ್ಯಕ್ರಮಗಳಿಂದ.



"ಜಗದಗಲ ಮುಗಿಲಗಲ
ಮಿಗೆಯಗಲ ನಿಮ್ಮಗ,
ಪಾತಾಳದಿಂದತ್ತತ್ತ ನಿಮ್ಮ ಶ್ರೀ
ಚರಣ
ಬ್ರಹ್ಮಾಂಡದಿಂದತ್ತತ್ತ
ನಿಮ್ಮ ಶ್ರೀ
ಮುಕುಟ
ಅಪ್ರಮಾಣ
ಅಗಮ್ಯ
ಅಗೋಚರ
ಅಪ್ರತಿಮ ಲಿಂಗವೆ,
ಲಿಂಗದೇವಯ್ಯ
ನೀವೆನ್ನ
ಕರಸ್ಥಲಕ್ಕೆ ಬಂದು
ಚುಳುಕಾದಿರಯ್ಯಾ"

ವಿಶ್ವಗುರು ಬಸವಣ್ಣನವರು ಇಷ್ಟಲಿಂಗ ಚುಳುಕಾಗಿ ಹೇಗೆ ಬಂದಿದೆ ಎಂಬುದನ್ನು ಹೇಳುತ್ತಾರಷ್ಟೆ. ಇದು ದೇವರ ಕುರುಹು ಪರಮಾತ್ಮನ ಕುರುಹು ಲಿಂಗದೇವನ ಕುರುಹು. ಲಿಂಗದೀಕ್ಷೆ ಇಲ್ಲದವರೂ ಇಂದಿನಿಂದಲೇ ದೀಕ್ಷೆ ಪಡೆದು, ಇಂಥಹ "ಬಸವ ಜ್ಯೋತಿ" ಕಾರ್ಯಕ್ರಮಗಳನ್ನು ಪ್ರತಿ ಕುಟುಂಬದವರು ತಮ್ಮ ಗೃಹಗಳಲ್ಲಿ ಪೂರೈಸಿಕೊಂಡು ಸತ್ ಸಂಕಲ್ಪಗಳನ್ನು ಈಡೇರಿಸಿಕೊಳ್ಳುವುದರೊಂದಿಗೆ ಬಸವ ಧರ್ಮದ ಮಹಿಮೆಯನ್ನು, ಕರ್ನಾಟಕದ ಧಾರ್ಮಿಕ, ಆಧ್ಯಾತ್ಮಿಕ, ಸಂಸ್ಕೃತಿಯ ಪರಂಪರೆಯನ್ನು ಹಾಗೂ ಭಾರತ ದೇಶದ ಕೀರ್ತಿಯನ್ನು ಬೆಳಗಿಸಲು ಮುಂದಾಗಿರೆಂದು ಹಾರೈಸುವೆವು.

ಅಕ್ಕನ ಅಮರವಾಣಿ ಭಾಗ-32



342. ದೃಢ ಸಂಕಲ್ಪ

ಭವಭವದಲ್ಲಿ ತೊಳಲಿ ಬಳಲಿತೆನ್ನ ಮನ,
ಆನೇವೆನಯ್ಯ ? ಹಸಿದುಂಡಡೆ ಉಂಡು
ಹಸಿವಾಯಿತ್ತು.
ಇದು ಕಾರಣ, ನೀನಿಕ್ಕಿದ ಮಾಯೆಯನಿನ್ನು
ಮುಟ್ಟದೆನಾದಡೆ
ಆಣೆ ನಿಮ್ಮಾಣೆ ಚನ್ನಮಲ್ಲಿಕಾರ್ಜುನ
ದೇವರದೇವಾ

ಅನೇಕ ಜನ್ಮಜನ್ಮಾಂತರಗಳಲ್ಲಿ ನನ್ನ ಮನಸ್ಸು ಕಾಯದ ಕತ್ತಲೆ, ಮನಸ್ಸು ನಾನಾ ಬಗೆಯ ಆಸೆಗಳ ಬಲೆಯಲ್ಲಿ ಸಿಲುಕಿ, ತೊಳಲಿ ಬಳಲಿತು. ಪ್ರಕೃತಿ ಗುಣಗಳಾದ ಹಸಿವು, ತೃಷೆ ಮುಂತಾದ ಕಾಯ ಮತ್ತು ಮನೋವಿಕಾರಗಳನ್ನು ಮೆಟ್ಟಲಾರದೆ ಮತ್ತೆ ಹುಟ್ಟಿ ಬಂದೆ. ಹಸಿದರೆ ಉಣ್ಣುವುದು; ಉಂಡರೆ ಹಸಿಯುವುದು- ಹೀಗೆ ಭವಚಕ್ರ

ಗರಗರನೆ ತಿರುಗಿತು. ಆದರೆ ಈಗ ನಿನ್ನೊಲುಮೆಯಾದ ಕಾರಣ ಇನ್ನು ಮುಂದೆ ಇಂಥ ಮಾಯೆಯ ಉಪಟಳದಿಂದ ನಾನು ಪಾರಾಗಿದ್ದೇನೆ.

343. ಸಮರಸಭ್ತಃ

ಅಯ್ಯಾ, ನಿಮ್ಮ ಮುಟ್ಟಿ ಮುಟ್ಟದೆನ್ನ ಮನ
ನೋಡಾ. ಬಿಚ್ಚಿ ಬೀಸರವಾಯಿತ್ತೆನ್ನ ಮನ
ಹೊಳಲ ಸುಂಕಿಗನಂತೆ
ಹೊದಕುಳಿಗೊಂಡಿತೆನ್ನ ಮನ
ಎರಡೆಂಬುದ ಮರೆದು ಬರಡಾಗದೆನ್ನ ಮನ
ನೀನು ಆನಪ್ಪ ಪರಿಯೆಂತು ಹೇಳಾ
ಚನ್ನಮಲ್ಲಿಕಾರ್ಜುನ ದೇವರದೇವಾ

ಓ ! ದೇವಾ...ನನ್ನ ಮನಸ್ಸು ನಿನ್ನ ಬಳಿಗೆ ಸಾರುತ್ತಿರುವಾಗಲೇ ಮತ್ತೆ ಹಿಂದೆ ಸರಿಯುತ್ತಿದೆ. ನಿನ್ನೊಡನೆ ಸಾಮರಸ್ಯಕ್ಕೆಂದೆ ಮೀಸಲಾಗಿರುವ ನನ್ನ ಮನಸ್ಸು ಹೀಗೆ ಬೀಸರವಾಗಿ ಚಂಚಲವಾಗಲು ಯತ್ನಿಸುತ್ತಿದೆ. ಸುಂಕ ವಸೂಲಿ ಮಾಡುವ ಪ್ರಾಮಾಣಿಕ ಅಧಿಕಾರಿಯು ಸುಂಕ ಕೊಡುವವರು ಕಳ್ಳಹಾದಿಯಲ್ಲಿ ತಪ್ಪಿಸಿಕೊಂಡಾಗ ಅನುಭವಿಸುವ ಯಾತನೆಯಂತೆ ನನ್ನ ಮನಸ್ಸು ನಿನ್ನನ್ನು ಕೂಡುವ ಕ್ಷಣಗಳು ಹಿಂಜರಿದಾಗ ದುಃಖ ಪಡುತ್ತಿದೆ. ನಾ-ನೀ ಎಂಬ ದ್ವೈತ ಭಾವ ಅಳಿದು ಏಕಭಾವ ಅಳವಡದೆ ಪರಿತಪಿಸುತ್ತಿದೆ. ನಾನು ನಿನ್ನಲ್ಲಿ ಒಂದಾಗುವ ಹಂಬಲ ಎಂದು ಮೈಗೂಡುವುದೋ ಎಂಬ ತವಕ ನಿರಂತರವಾಗಿ ಬಾಧಿಸುತ್ತಿದೆ.

344. ಕರುಣ ಪ್ರಸಾದ

ಬಸವಣ್ಣನ ಭಕ್ತಿ, ಚೆನ್ನ ಬಸವಣ್ಣನ ಜ್ಞಾನ
ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ
ಜಂಗಮಸ್ಥಲ ಅಜಗಣ್ಣನ ಐಕ್ಯಸ್ಥಲ,
ನಿಜಗುಣನ ಆರೂಢಸ್ಥಲ
ಸಿದ್ಧರಾಮಯ್ಯನ ಸಮಾಧಿಸ್ಥಲ
ಇಂತಿವರ ಕರುಣಪ್ರಸಾದ ಎನಗಾಯಿತ್ತು
ಚನ್ನಮಲ್ಲಿಕಾರ್ಜುನ ದೇವರದೇವಯ್ಯ

ಅನುಭವ ಮಂಟಪಕ್ಕೆ ಆಗಮಿಸಿದ ಅಕ್ಕ ಮಹಾದೇವಿಯವರು ಗುರು ಬಸವಣ್ಣನವರಿಂದ ಸಂಪೂರ್ಣ ಶರಣಾಗತಿ ಭಾವದ ಸದ್ಭಕ್ತಿಯ ಮರ್ಮವನ್ನು ಅರಿತು ಅಳವಡಿಸಿಕೊಂಡು ಸಾಧನೆಯಲ್ಲಿ ನಿರತರಾದರು. ಪರಿಶುದ್ಧ ಸುಜ್ಞಾನದಿಂದ ಶೋಭಿಸುತ್ತಿದ್ದ ಚಿನ್ಮಯ ಜ್ಞಾನಿ ಚೆನ್ನಬಸವಣ್ಣನವರ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ತಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸಿಕೊಂಡರು. ಗುರು ಬಸವಣ್ಣನವರನ್ನು ಪ್ರಾಣಸ್ವರೂಪರೆಂದು ಭಾವಿಸಿ ತಮ್ಮ ಸಂಪೂರ್ಣ ನಿಷ್ಠೆ ಗುರುವಿಗೆ ಮೀಸಲಿರಿಸಿದ ಅಪೂರ್ವ ಚೇತನ ಮಡಿವಾಳ ಮಾಚಿತಂದೆಯವರ ಗಣಾಚಾರಿ ತತ್ವವನ್ನು ಕಂಡು ಅವರ ಮನ್ನಣೆಗೆ ಪಾತ್ರರಾದರು. ಸಾಧಕರ ಮನಮತಿಗಳಿಗೆ ಕ್ಷಕಿರಣಗಳನ್ನು ಹರಿಸಿ ಆದ್ಯಾತ್ಮ ಸಾಧನಾ ಪಥದ ತಪ್ಪುಒಪ್ಪುಗಳನ್ನು ತಿದ್ದಿತೀಡಿ ಸರಿಪಡಿಸಿ ಮಾರ್ಗದರ್ಶನ ಮಾಡುತ್ತಿದ್ದ ಪ್ರಭುದೇವರ ಪಿತೃ ವಾತ್ಸಲ್ಯದಿಂದ ವ್ಯಕ್ತಿತ್ವ ಪಕ್ವಗೊಂಡಿತು. ಅಜಗಣ್ಣನವರ ಭಾವಲಿಂಗೈಕ್ಯ ಸಿದ್ಧಸ್ಥಿತಿಯ ಸೋಂಕಿನಿಂದ ಭಾವವೂ ಪರಿಶುದ್ಧಗೊಂಡಿತು. ನಿಜಗುಣ ಯೋಗಿಯ ತ್ರಿಪುಟಿ ಅಳಿದ ಲಿಂಗಾಂಗ ಸಾಮರಸ್ಯ ಸ್ಥಲ ಹಾಗೂ ಸಿದ್ಧರಾಮೇಶ್ವರರ ಭಾವಸಮಾಧಿಯ ಯೋಗಸಿದ್ಧಿ ಪಡೆದ ಮಹಾನುಭಾವರ ಸಂಗದಿಂದ ಮತ್ತು ಅವರು ತೋರಿದ ಪ್ರೀತ್ಯಾದರಕರುಣೆಗಳಿಂದ ನನ್ನ ಸಾಧನೆ ಸುಗಮವಾಗಿ ಸಾಗಿತು.

345. ದೇವಾನುಭಾವ

ಲಿಂಗವೆನ್ನೆ ಲಿಂಗೈಕ್ಯವೆನ್ನೆ,
ಸಂಗವೆನ್ನೆ ಸಮರಸವೆನ್ನೆ
ಆಯಿತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ
ಚನ್ನಮಲ್ಲಿಕಾರ್ಜುನ ದೇವರದೇವಯ್ಯ
ಲಿಂಗೈಕ್ಯವಾದ ಬಳಿಕ ಏನೂ ಎನ್ನೆ

ಆರೂಢ ಸ್ಥಿತಿ ತಲುಪಿದ ಮನಮತಿಗಳು ಇಲ್ಲಿ ಪೂಜ್ಯ-ಪೂಜ್ಯಕ-ಪೂಜ್ಯ ಎಂಬ ಭಿನ್ನಭಾವ ಸಂಪೂರ್ಣವಾಗಿ ಅಳಿದುಕೊಂಡು ನಿರ್ಭಾವ ಸ್ಥಿತಿ ತಲುಪಿವೆ. ಉರಿಯ ಅಪ್ಪುಗೆಯಲ್ಲಿ ಕರ್ಪೂರವೂ ಕರಗುವಂತೆ ದೇಹಭಾವವು ಅಳಿದು ಅರಿವು ದೇವಾನುಭಾವದ ಸಮರಸದಲ್ಲಿ ಪರಿಪೂರ್ಣವಾದ ಭಾವವಿಲ್ಲಿದೆ.

346. ಭಾವಾತೀತ ಸ್ಥಿತಿ

ನಿತ್ಯವೆಂಬ ನಿಜಪದವನ್ನ ಹತ್ತೆ ಸಾರ್ದು
ಕಂಡ ಬಳಿಕ ಚಿತ್ತ ಕರಗಿ ಮನ ಕೊರಗಿ

ಹೃದಯವರಳಿತ್ತು ನೋಡಯ್ಯ
ಒತ್ತಿ ಬಿಗಿದ ಸೆರೆಯೊಳಗೆ ಅತ್ತಿತ್ತಲೆಂದರಿಯದೆ
ಚನ್ನಮಲ್ಲಿಕಾರ್ಜುನನ ದೇವರ ಪಾದದಲ್ಲಿ
ಮರದೊರಗಿದೆ ನೋಡಯ್ಯ

ಸಚ್ಚಿದಾನಂದ ಸ್ವರೂಪದ, ನಿತ್ಯವಾದ ಪರಮಾತ್ಮನ ಆನಂದವು ನನ್ನ ಹತ್ತಿರ ಸುಳಿದಾಗ ಚಿತ್ತದ ಉಗ್ರಾಣದಲ್ಲಿದ್ದ ನೆನಪುಗಳ ಸಂಗ್ರಹ ಕರಗಿತು. ಮನದ ಸಂಕಲ್ಪ-ವಿಕಲ್ಪಗಳು ಅಳಿದು, ನೀರು ಬತ್ತಿದ ಕೆರೆಯಂತೆ ಅದು ಸೊರಗಿ-ತು. ಹೃದಯ ಕಮಲವು ಸಾಕ್ಷಾತ್ಕಾರದ ರವಿಕಿರಣಗಳಿಂದ ಸಂತಸಗೊಂಡು ದಳಬಿಚ್ಚಿತು. ಸರ್ವಾಂಗವನ್ನು ಬಿಗಿದಪ್ಪಿದ ಬಂಧನದ ಪರಿಣಾಮವಾಗಿ ಏನೂ ಕಾಣದಂತಾಯಿತು. ಎಲ್ಲ ಭಾವನೆಗಳು ಅಳಿದು ಚನ್ನಮಲ್ಲಿಕಾರ್ಜುನನ ದೇವರ ಪಾದದಲ್ಲಿ ಭಾವನಾತೀತಳಾಗಿ ಒರಗಿದೆ.

348. ನಡೆನುಡಿ

ಆಡಬಹುದು ಪಾಡಬಹುದಲ್ಲದೆ
ನುಡಿದಂತೆ ನಡೆಯಬಾರದು ಎಲೆ ತಂದೆ
ಲಿಂಗಕ್ಕೆ ಶರಣೆನ್ನಬಹುದಲ್ಲದೆ
ಜಂಗಮಕ್ಕೆ ಶರಣೆನ್ನಬಾರದೆಲೆ ತಂದೆ
ಚನ್ನಮಲ್ಲಿಕಾರ್ಜುನ ದೇವರ ದೇವಾ
ನಿಮ್ಮ ಶರಣರು ನುಡಿದಂತೆ ನಡೆಯಬಲ್ಲರು
ಎಲೆ ತಂದೆ

ಗುರುಲಿಂಗ ಜಂಗಮವನ್ನು ಕುರಿತು ಮಾತಾಡುವುದು; ಇದರ ಗುಣಗಾನ ಮಾಡುತ್ತಾ ಹಾಡುವುದು ಬಹು ಸುಲಭ. ಮಾತಾಡಿದಂತೆ ಗುರುಲಿಂಗ ಜಂಗಮಕ್ಕೆ ತನುಮನಧನ,ಪ್ರಾಣ,ಸಮಯ ಅಭಿಮಾನವನ್ನು ಅರ್ಪಿಸಿ ಸವೆಯುವುದು ತುಂಬಾ ಕಠಿಣ. ಅದೇ ರೀತಿ ಲಿಂಗ-ಪರಮಾತ್ಮನಿಗೆ ಶರಣಾಗಬಹುದು. ಜಂಗಮ ಅಂದರೆ ಜ್ಞಾನಿ, ಸಮಾಜ ಸೇವಕ ಅಥವ ಸುಧಾರಕನಿಗೆ ಅವನು ನಡೆದು-ತೋರಿದ ಹಾದಿಯನ್ನು ಒಪ್ಪಿಕೊಂಡು ಶರಣಾಗಿ ಹಿಂಬಾಲಿಸುವುದು ಬಹು ಕಠಿಣ. ಇಂಥ ಅಸಾಮಾನ್ಯ ನುಡಿಗಳನ್ನು ನಡೆಯನ್ನಾಗಿ ಪರಿವರ್ತಿಸಿ ತಮ್ಮ ಜೀವನದಲ್ಲಿ ಸಂಪೂರ್ಣವಾಗಿ ಅಳವಡಿಸಿಕೊಂಡು ತ್ರಿಕರಣಶುದ್ಧರಾಗಿ ಬದುಕಿ ಜಗತ್ತಿಗೆ ಮಾದರಿಯಾಗುವ ಸಾಮರ್ಥ್ಯವಿರುವುದು ಸತ್ಯನಿಷ್ಠ ಶರಣರಿಗೆ ಮಾತ್ರ ಸಾಧ್ಯ.

349. ಅನುಗ್ರಹ


ಕುಲಮದವೆಂಬುದಿಲ್ಲ ಅಯೋನಿ
ಸಂಭವನಾಗಿ
ಛಲಮದವೆಂಬುದಿಲ್ಲ ಪ್ರತಿದೋರನಾಗಿ
ಧನಮದವೆಂಬುದಿಲ್ಲ ತ್ರಿಕರಣ ಶುದ್ಧನಾಗಿ
ವಿದ್ಯಾಮದವೆಂಬುದಿಲ್ಲ ಅಸಾಧ್ಯವ
ಸಾಧಿಸಿದನಾಗಿ ಮತ್ತಾವ ಮದವೆಂಬುದಿಲ್ಲ
ನೀನವಗ್ರಹಿಸಿದ ಕಾರಣ
ಚನ್ನಮಲ್ಲಿಕಾರ್ಜುನ ದೇವರ ದೇವಾ
ನಿಮ್ಮ ಶರಣನು ಅಕಾಯ ಚರಿತ್ರನಾಗಿ

ಲಿಂಗಭಕ್ತನು ಶರಣಸ್ಥಲದ ಹಂತದಲ್ಲಿ ಸಾಧಿಸಿದ ಅನುಪಮವಾದ ಸಿದ್ಧತ್ವದ ಲಕ್ಷಣವನ್ನು ಅಕ್ಕನವರು ಇಲ್ಲಿ ದಾಖಲಿಸಿದ್ದಾರೆ. ಐಕ್ಯಸ್ಥಿತಿಗೆ ಸಮೀಪವಾದ ಶರಣತ್ವವನ್ನು ಸಾಧಕನು ತಲುಪಿದಾಗ ಅವನಲ್ಲಿ ಸಪ್ತಮದಗಳಲ್ಲಿ ಒಂದಾದ ಜನ್ಮಕ್ಕೆ ಕಾರಣವಾದ ಕುಲಮದವನ್ನು ಜಯಿಸಿ ಭವವನ್ನು ಹರಿದುಕೊಂಡಿದ್ದಾನೆ. ಅವನ ಸಾಧನೆಗೆ ಅಡ್ಡಿಯಾಗುವ ಪರದೈವ, ಪರಧನ, ಪರಸತಿ, ಪರನಿಂದೆ ಮುಂತಾದ ಯಾವ ಪ್ರತಿರೋಧಗಳು ಇಲ್ಲದ ಕಾರಣ ಛಲಮದ ಸಂಪೂರ್ಣ ನಶಿಸಿ ಹೋಗಿದೆ. ಇನ್ನು ತನ್ನಲ್ಲಿದ್ದ ಧನ ಸಂಪತ್ತು ಜಂಗಮಕ್ಕೆ ವಂಚನೆಯಿಲ್ಲದೆ ಸಮರ್ಪಣೆಯಾಗಿರುವ ಕಾರಣ ಧನಮದಕ್ಕೆ ಮನದಲ್ಲಿ ಸ್ಥಳವಿಲ್ಲದೆ ಪಲಾಯನಗೈದಿದೆ. ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣನಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು ಅದ್ವಿತೀಯ ಆನಂದದಲ್ಲಿರುವುದರಿಂದ ಸಾಧಿಸಲು ಮತ್ತೇನೂ ಉಳಿದಿಲ್ಲವಾದ ಕಾರಣ ವಿದ್ಯಾಮದವು ಹೇಳ ಹೆಸರಿಲ್ಲದಂತೆ ಮಾಯವಾಗಿದೆ. ಪರಮಾತ್ಮನ ಅನುಗ್ರಹದಿಂದ ಸಪ್ತಮದಗಳನ್ನು ಜಯಿಸಿ ಭವಚಕ್ರವನ್ನು ದಾಟಲು ಸಾಧ್ಯವಾದುದಲ್ಲದೆ ಸಾಧನೆಯ ಉತ್ತುಂಗವನ್ನು ಏರಲು ನೆರವಾಯಿತು ಎಂದು ದೇವನ ಕರುಣೆಯನ್ನು ಕೊಂಡಾಡುತ್ತಿದ್ದಾರೆ.

ಮುಂದುವರಿಯುವುದು...

ಬಸವ ಜ್ಯೋತಿ ಮಂಗಳ ಗೀತೆ !!!





ಬೆಳಗಲಿ ಬೆಳಗಲಿ
ಬಸವ ಜ್ಯೋತಿ ಬೆಳಗಲಿ
ಬೆಳೆಸಲಿ ಬೆಳೆಸಲಿ
ವಿಶ್ವ ಪ್ರೇಮ ಬೆಳೆಸಲಿ ॥ ಪ ॥

ಮೇಲು ಕೀಳೆಂಬ ಅಸಮತೆ ಅಳಿಯಲಿ
ಎಲ್ಲರು ಸಮರೆಂಬ ಸದ್ಭಾವ ಮೂಡಲಿ
ಬಲ್ಲಿದ ಬಡವ ಭೇದ ಭಾವ ತೊಲಗಲಿ
ಕ್ಷುಲ್ಲಕ ಬುದ್ಧಿಯ ಕತ್ತಲೆಯು ಹರಿಯಲಿ ॥ 1 ॥



'ಕಾಯಕವೇ ಕೈಲಾಸ' ಮಂತ್ರವು ನಲಿಯಲಿ
'ದಯವೆ ಧರ್ಮದ ಮೂಲ' ಭಾವವು ಬೆಳೆಯಲಿ
ಶಾಂತಿ ಸಮತೆಗಳು ಲೋಕದಿ ನೆಲೆಸಲಿ
ಈ ಇಳೆಯೊಳಗೆ ನಾಕವ ಇಳಿಸಲಿ ॥ 2 ॥

ಕರ್ತನ ಮಹಿಮೆಯ ಸರ್ವರು ಹಾಡಲಿ
ಮರ್ತ್ಯದ ಬಾಳೊಳು ಎಲ್ಲರು ಸಲ್ಲಲಿ
ಗುರು ಬಸವಣ್ಣನ ವಚನಾಮೃತದಲಿ
ಪರಮಾನಂದವ ಮನುಕುಲ ಪಡೆಯಲಿ ॥ 3 ॥



ನತ ಜನ ರಕ್ಷಕ ಗುರು ಬಸವಗೆ ನಮೋ
ಪತಿತೋದ್ಧಾರಕ ಮಹಾ ಕರುಣೆಗೆ ನಮೋ
ಶ್ರೀ ಲಿಂಗದೇವನ ಕಂದಗೆ ನಮೊ ನಮೋ
ಮಂಗಲಮಯ ವಿಶ್ವಜ್ಯೋತಿಗೆ ನಮೊ ನಮೋ ॥ 4 ॥

ಬೆಳಗಲಿ ಬೆಳಗಲಿ
ಬಸವ ಜ್ಯೋತಿ ಬೆಳಗಲಿ
ಬೆಳೆಸಲಿ ಬೆಳೆಸಲಿ
ವಿಶ್ವ ಪ್ರೇಮ ಬೆಳೆಸಲಿ ॥ ಪ ॥

* ಲೇಖಕರು: - ಪೂಜ್ಯಶ್ರೀ ಮಹಾಜಗದ್ಗುರು ಡಾ. ಮಾತೆ ಮಹಾದೇವಿ

***** ಪ್ರಕಟಣೆ *****

ಓಂ ಶ್ರೀ ಗುರು ಬಸವ ಲಿಂಗಾಯ ನಮಃ
866666

ಲಿಂಗಾಯತ ಧರ್ಮದ ಮಾನ್ಯತೆಗಾಗಿ ಕೂಡಲ ಸಂಗಮದಲ್ಲಿ
ಮಠಾಧಿಪತಿಗಳು ಮತ್ತು ಸಮಾಜದ ಪ್ರಮುಖರ ಸಭೆ

ಶರಣ ಬಂಧುಗಳಿಗೆ ಶರಣು ಶರಣಾರ್ಥಿ...

ಲಿಂಗಾಯತವು ಒಂದು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮ. ಜೈನ, ಬೌದ್ಧ, ಸಿಖ್ ಧರ್ಮಗಳು ಭಾರತದಲ್ಲಿಯೇ ಹುಟ್ಟಿ ಸ್ವತಂತ್ರ ಧರ್ಮದ ಮಾನ್ಯತೆಯನ್ನು ಪಡೆದಿರುವುದೇ ಅಲ್ಲದೆ ಧಾರ್ಮಿಕ ಅಲ್ಪ ಸಂಖ್ಯಾತರ ಸ್ಥಾನಮಾನ ಸೌಲಭ್ಯವನ್ನು ಪಡೆದಿವೆ.

12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರಿಂದ ಸಂಸ್ಥಾಪಿತವಾದ ಲಿಂಗಾಯತ ಧರ್ಮವು ಸ್ವತಂತ್ರ ಧರ್ಮವೆಂದು ಸಂವಿಧಾನಾತ್ಮಕ ಮನ್ನಣೆಯನ್ನು ಪಡೆಯದಿರಲು ಲಿಂಗಾಯತ ಸಮಾಜದಲ್ಲಿರುವ ಅಜ್ಞಾನ ಮತ್ತು ಅನೈಕ್ಯತೆಯೇ ಕಾರಣ. ಈ ದಿಶೆಯಲ್ಲಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಮಾನ್ಯತೆ ಪಡೆಯಲು ಜಾಗೃತಿ ಕಾರ್ಯಕ್ರಮ ರೂಪಿಸಬೇಕಾಗಿದೆ. ಮಹಾರಾಷ್ಟ್ರ ಬಸವ ಬ್ರಿಗೇಡ್ ನಾಯಕ ಶರಣ.ಅವಿನಾಶ ಬೋಶೀಕರ್ ಮತ್ತು ಮಹಾರಾಷ್ಟ್ರ ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷ ಶರಣ. ಶಿವರಾಜ ಕಂಕರೆ ಅವರು ಮಹಾರಾಷ್ಟ್ರದಾದ್ಯಂತ ಲಿಂಗಾಯತ ಸಮಾಜದ ಜಾಗೃತಿ ಮತ್ತು ಸಂಘಟನೆ ಮಾಡುತ್ತಿದ್ದು ಆ ರಾಜ್ಯದ ವಿವಿಧ ಸ್ಥಳಗಳಲ್ಲಿ ಬೃಹತ್ ರ್‍ಯಾಲಿಗಳನ್ನು ಏರ್ಪಡಿಸುತ್ತಿದ್ದಾರೆ.

ಲಿಂಗಾಯತ ಸಮಾಜ ಎಂದರೆ ಏನು ಮಾಡಬೇಕೆಂದು ನಿರ್ಣಯಿಸಲು ಕೂಡಲ ಸಂಗಮದಲ್ಲಿ ಒಂದು ಸಭೆಯನ್ನು ಕರೆಯಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ. ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ತಮಿಳುನಾಡಿನ ಲಿಂಗಾಯತ ಮಠಾಧೀಶರು, ಸ್ವಾಮಿಗಳು ಮತ್ತು ಸಂಘ - ಸಂಸ್ಥೆಗಳ ಪದಾಧಿಕಾರಿಗಳು, ರಾಜಕಾರಣಿಗಳು ಈ ಸಭೆಯಲ್ಲಿ ಪಾಲ್ಗೊಳ್ಳಬೇಕೆಂಬ ಆಶಯ ಅವರದು. ಅವರ ಆಶಯದಲ್ಲಿರುವ ಪ್ರಾಮಾಣಿಕ ಸಾಮಾಜಿಕ ಕಳಕಳಿಯನ್ನು ಗಮನಿಸಿ ಕೂಡಲ ಸಂಗಮದ ಬಸವಧರ್ಮ ಪೀಠದ ವತಿಯಿಂದ ಸಭೆ ಕರೆಯಲು ನಿರ್ಧರಿಸಲಾಗಿದೆ. 2016ನೇ ಇಸವಿ ಸೆಪ್ಟೆಂಬರ್ 11 ಭಾನು(ದೇವ) ವಾರದಂದು ಬೆಳಗ್ಗೆ 10-30ರಿಂದ ಸಭೆಯನ್ನು ಏರ್ಪಡಿಸಲಾಗಿದೆ. ಕೂಡಲ ಸಂಗಮದ ಶ್ರೀ ಸಂಗಮೇಶ್ವರ ಕಲ್ಯಾಣ ಮಂಟಪದಲ್ಲಿ ಈ ಸಭೆ ಜರುಗಲಿದೆ.

ಮಠಾಧೀಶರು, ಸ್ವಾಮಿಗಳು, ಲಿಂಗಾಯತ ಸಮಾಜದ ಒಳಪಂಡಗಳ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಬಸವ ತತ್ವ ಪ್ರಚಾರಕ ಸಂಘಟನೆಗಳು, ಪದಾಧಿಕಾರಿಗಳು, ಆಸಕ್ತರು, ಬಸವಾಭಿಮಾನಿಗಳು, ರಾಷ್ಟ್ರೀಯ ಬಸವ ದಳದ ಪ್ರಮುಖರು ಭಾಗವಹಿಸಿ ಮುಂದಿನ ಕಾರ್ಯ ರೂಪಿಸುವಲ್ಲಿ ಸಲಹೆ-ಸೂಚನೆ ನೀಡಬೇಕೆಂದು ಮನವಿ ಮಾಡುತ್ತಿದ್ದೇವೆ. ಬಸವ ಧರ್ಮ ಪೀಠದ ವತಿಯಿಂದ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಲಾಗುತ್ತಿದೆ. ಈ ಪ್ರಕಟಣೆಯನ್ನು ವೈಯಕ್ತಿಕ ಆಹ್ವಾನವೆಂದು ಭಾವಿಸಬೇಕೆಂದು ಬಿನ್ನವಿಸುತ್ತೇವೆ.

*****ಶರಣು ಶರಣಾರ್ಥಿಗಳೊಡನೆ*****

ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ. ಕೂಡಲ ಸಂಗಮ

ಸಂಪರ್ಕಿಸುವ ವಿಳಾಸ:

ಬಸವ ಧರ್ಮ ಪೀಠ(ರಿ.)
ಬಸವ ಮಂಟಪ, 2035, 2ನೇಬ್ಲಾಕ್
20ನೇ ಮುಖ್ಯರಸ್ತೆ, ರಾಜಾಜಿನಗರ
ಬೆಂಗಳೂರು-560010
080-23131476, 9448137508

ಪೂಜ್ಯ ಶ್ರೀ ಮಾದೇಶ್ವರ ಸ್ವಾಮಿಗಳು
ಬಸವ ಧರ್ಮ ಪೀಠ, ಮಹಾಮನೆ ಮಹಾಮಠ
ಕೂಡಲ ಸಂಗಮ- 587715, ತಾ-ಹುನಗುಂದ,
ಜಿ-ಬಾಗಲಕೋಟೆ
9483748266, 9449588665

ಸೂಚನೆ: ಕಾರ್ಯಕ್ರಮ ನಿರ್ವಹಣೆಗಾಗಿ ಸ್ವಯಂಪ್ರೇರಣೆಯಿಂದ ದೇಣಿಗೆ ಕೊಡಲು ಅವಕಾಶವಿದೆ.



ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ

ಬಸವ ಭಕ್ತರು ರೊಚ್ಚಿಗೇಳುವ ಮುನ್ನ

ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳಾಗಿರುವ ಪೂಜ್ಯ ಶ್ರೀ ಮಹಾಜಗದ್ಗುರು ಡಾ:ಮಾತೆ ಮಹಾದೇವಿಯವರ ನೇತೃತ್ವ ಮಾರ್ಗದರ್ಶನಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ಕೂಡಲ ಸಂಗಮ ವತಿಯಿಂದ ಶರಣಭೂಮಿ ಬಸವಕಲ್ಯಾಣದಲ್ಲಿ 21 ಎಕರೆ ಜಮೀನು ಖರೀದಿಸಿ ಸರ್ಕಾರದ ನಯಾ ಪೈಸೆ ಅನುದಾನವಿಲ್ಲದೆ ಭಕ್ತರ ದೇಣಿಗೆಯಿಂದ 108 ಅಡಿ ಎತ್ತರದ ಐತಿಹಾಸಿಕ ಗುರು ಬಸವ ಪುತ್ಥಳಿಯನ್ನು ನಿರ್ಮಿಸಲಾಗಿದೆ. 2004ರಲ್ಲಿ ಆರಂಭವಾದ ನಿರ್ಮಾಣ ಕಾರ್ಯವು 2012ರಲ್ಲಿ ಪೂರ್ಣಗೊಂಡು ಅಕ್ಟೋಬರ್ 29-2012 ರಂದು 11ನೇ ಕಲ್ಯಾಣ ಪರ್ವದಲ್ಲಿ ವಿದ್ಯುಕ್ತವಾಗಿ ಅನಾವರಣಗೊಂಡಿತು ಇದರಲ್ಲಿ ಸುಮಾರು 8 ಲಕ್ಷಕ್ಕೂ ಅಧಿಕ ಜನ ಶರಣ-ಶರಣೆಯರು ಆ ಹೃದಯಸ್ಪರ್ಶಿ ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಬಸವ ಧರ್ಮ ಪೀಠದ ಸಾಧಕ-ಸಾಧಕಿಯರು, ಶರಣ-ಶರಣೆಯರು, ಎಲ್ಲ ಬಸವ ಭಕ್ತರು ಪೂಜ್ಯ ಮಾತಾಜಿ ಎಂಬ ರಾಣಿ ಜೇನಿನ ನೇತೃತ್ವದಲ್ಲಿ ಇಂಥ ಒಂದು ಹುಟ್ಟನ್ನು ನಿರ್ಮಿಸಲಾಯಿತು. ಆದರೆ ಧರ್ಮಿಗೊಂದು ಚಿಂತೆ, ಕರ್ಮಿಗೊಂದು ಚಿಂತೆ, ಎಮ್ಮೆಗೊಂದು ಚಿಂತೆ, ಸಮಗಾರನಿಗೊಂದು ಚಿಂತೆ ಎಂಬಂತೆ ಜಗತ್ತಿನ ಮೂಲೆ ಮೂಲೆಗಳಿಂದ ಬಸವ ಕಲ್ಯಾಣ ದರ್ಶನಕ್ಕೆ ಬರಲಿ ಎಂಬ ಆಶಯದಿಂದ ಭವ್ಯ-ದಿವ್ಯ ಸ್ಮಾರಕವನ್ನು ಕಷ್ಟ ಪಟ್ಟು ಶರಣರು ನಿರ್ಮಿಸಿದರು. ಈ ಮೂರ್ತಿಯ ಸುತ್ತಲೂ ನಿವೇಶನಗಳನ್ನು ಮಾಡಿ ಕೋಟಿ ಕೋಟಿ ಸಂಪಾದನೆ ಮಾಡಬೇಕೆಂದು ದುರಾಸೆಯಿಂದ ಸ್ಥಳೀಯ ಅರವಿಂದ ಭೂರಾಳೆ ಎಂಬ ವ್ಯಕ್ತಿ ಕೃಷಿ ಜಮೀನನ್ನು ಖರೀದಿಸಿ ಯದ್ವಾತದ್ವಾ ಹಣ ಚೆಲ್ಲಿ ಭೂ ಪರಿವರ್ತನೆಯೂ (ಎನ್‌ಎ) ಮಾಡಿಸಿಯಾಗಿದೆ. ಇದರಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ. ಎಲ್ಲವೂ ಅಕ್ರಮವಾಗಿ ಮಾಡಲಾಗಿದೆ ಜಮೀನನ್ನು ಕೃಷಿಯೇತರ ಚಟುವಟಿಕೆ ಅಥವಾ ವಸತಿ ನಿವೇಶನಕ್ಕಾಗಿ ಭೂಪರಿವರ್ತನೆ ಮಾಡಬೇಕಾದರೆ ಪಾಲಿಸಬೇಕಾದ ಕಾನೂನಾತ್ಮಕ ನಿಯಮಾವಳಿಯನ್ನು ಗಾಳಿಗೆ ತೂರಿ ಅಕ್ರಮವಾಗಿ ಎನ್‌ಎ ಮಾಡಿಸಲಾಗಿದೆ ಈ ಅಕ್ರಮದಲ್ಲಿ ಜಿಲ್ಲಾಡಳಿತವೂ ಶಾಮೀಲಾಗಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ.

ಅತ್ಯಂತ ಶ್ರಮವಹಿಸಿ ನಿರ್ಮಿಸಿದ ವಿಶ್ವಗುರು ಬಸವಣ್ಣನವರ ಬೃಹತ್ ಸ್ಮಾರಕವು ಈ ವಿಶ್ವವಿಖ್ಯಾತಿ ಪಡೆದಿದೆ. ಬಸವ ಕಲ್ಯಾಣ ತಾಲ್ಲೂಕಿನ ತ್ರಿಪೂರಾಂತ ಗ್ರಾಮ ವ್ಯಾಪ್ತಿಯಲ್ಲಿ ಅಂದರೆ ಈಗ ಅದು ಬಸವ ಕಲ್ಯಾಣ ಪರಸಭಾ ವ್ಯಾಪ್ತಿಗೆ ಒಳಪಡುತ್ತದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಜಮೀನಿನ ಸುತ್ತಲೂ ಬೇರೆ ಬೇರೆ ರೈತರ ಕೃಷಿ ಜಮೀನಿತ್ತು, ಅದನ್ನು ಬಡಾವಣೆ ನಿರ್ಮಿಸುವ ಉದ್ದೇಶದಿಂದ ಡೀಲರ್‌ಗಳು ಖರಿದಿಸಿದ್ದಾರೆ. ಸರ್ವೆ ನಂ 210/1 ನ್ನು ಅರವಿಂದ ಭುರಾಳೆ ವಸತಿ ಯೋಜನೆಗಾಗಿ ಭೂಪರಿವರ್ತನೆ ಮಾಡಿಸಿದ್ದು; ಬಸವಣ್ಣನವರ ಪುತ್ಥಳಿಯ ಮುಂಭಾಗದಲ್ಲಿ ಈ ಜಾಗವಿದೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯವತಿಯಿಂದ ಒಪ್ಪಿಗೆ ಪಡೆಯದೆ ತಗ್ಗು ದಿನ್ನೆ ಸಮ ಮಾಡಿ



ಎತ್ತರದ ಬೆಟ್ಟವನ್ನು ಅಗೆದು ತಗ್ಗಿಗೆ ಆ ಮಣ್ಣನ್ನು ಭರ್ತಿ ಮಾಡಿ ಅಂಥ ಜಾಗದಲ್ಲಿ ಈಗ ನಿವೇಶನಗಳನ್ನು ನಿರ್ಮಿಸಿ ಮಾರಾಟ ಮಾಡಲಾರಂಭಿಸಿದ್ದಾರೆ.

ಇಷ್ಟಾದರೂ ಗಣಿ ಇಲಾಖೆ, ಅರಣ್ಯ ಇಲಾಖೆ ಯಾರೂ ಆಕ್ಷೇಪಣೆ ಮಾಡಿಲ್ಲ ಎನ್.ಎ. ಮಾಡಲು ನಮ್ಮ ಆಕ್ಷೇಪಣೆ ಇಲ್ಲ ಎನ್ನುವಂತೆ ಮೌನವಾಗಿದ್ದಾರೆ. ನಮ್ಮ ಲಿಂಗಾಯತ ಧರ್ಮ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾದ ಶರಣ ಶಿವರಾಜ ಪಾಟೀಲ ಅತಿವಾಳ ಅವರು ಅನೇಕ ಸಾರಿ ಜಿಲ್ಲಾಧಿಕಾರಿ ಕಚೇರಿಗೆ ಹೋಗಿ ಭೂಪರಿವರ್ತನೆ ಯೋಜನೆಗೆ ಆಕ್ಷೇಪಣೆ ಸಲ್ಲಿಸಿದ್ದಾರೆ.

ಬಸವ ಮಹಾಮನೆ ಸಂರಕ್ಷಣ ಸಮಿತಿಯ ವತಿಯಿಂದ ಸಲ್ಲಿಸಲಾದ ಆಕ್ಷೇಪಣ ಪತ್ರಗಳನ್ನು ಡಿ.ಸಿ. ಆಫೀಸ್‌ನವರು ಅವಕ ಪುಸ್ತಕದಲ್ಲಿ ನೋಂದು ಕೂಡ ಮಾಡಿಕೊಳ್ಳದೆ ಕಸದ ಬುಟ್ಟಿಗೆ ಎಸೆದಿದ್ದಾರೆ. ಆನೇಕ ಸಾರಿ ಜಿಲ್ಲಾಧಿಕಾರಿಗಳ ಕಛೇರಿಯ ಸಿಬ್ಬಂದಿಗಳು ಶ್ರೀ ಶಿವರಾಜ ಪಾಟೀಲರ ಮುಂದೆ ಮಾತನಾಡುತ್ತ ಛುರಾಳೆ ಡಿ.ಸಿ. ಆಫೀಸನ್ನು ಖರೀದಿ ಮಾಡ್ಯಾನ ನೀವೇನು ಮಾಡಿದ್ರೂ ಉಪಯೋಗವಿಲ್ಲ ಅನ್ನುವ ಮಾತನ್ನು ಕೂಡ ಹೇಳಿದ್ದರು.

ಇದರಿಂದ ಸ್ಪಷ್ಟವಾಗಿ ಗೊತ್ತಾಗುವುದೇನೆಂದರೆ, ಈ ಹಿಂದೆ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜಿಲ್ಲಾಧಿಕಾರಿ ಬಸವ ಕಲ್ಯಾಣದ ಸಹಾಯಕ ಆಯುಕ್ತರು ಎಲ್ಲರೂ ಭ್ರಷ್ಟಾಚಾರದಲ್ಲಿ ಶಾಮಿಲಾಗಿದ್ದಾರೆಂಬ ಅನುಮಾನ ಬರುತ್ತಿದೆ. ಸೂಕ್ತವಾದ ತನಿಖೆಯಾಗಿ ಸತ್ಯ ಹೊರಬರಲಿ ಎಂಬುದೇ ಬಸವ ಭಕ್ತರ ಅಭಿಪ್ರಾಯವಾಗಿದೆ.

ಜುಲೈ 22 ರಂದು ಬಸವಕಲ್ಯಾಣ ಪಟ್ಟಣದಲ್ಲಿ ಬೃಹತ್ ಪ್ರಮಾಣದ ಪ್ರತಿ ಭಟನಾ ಮೆರವಣಿಗೆ ಆಯಿತು. ಅನೇಕ ಜನ ಪೂಜ್ಯರು, ಸಾವಿರಾರು ಜನ ಬಸವಭಕ್ತರು ಆ ಪ್ರತಿಭಟನೆಯಲ್ಲಿ ಪಾಲ್ಗೊಂಡು ವಸತಿಯೋಜನೆಯನ್ನು ರದ್ದು ಪಡಿಸುವಂತೆ ಒತ್ತಾಯಿಸಿದರು, 24 ರಂದು ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆಯವರನ್ನು ಬೀದರಿನ ಜನಸ್ಪಂದನ ಕಾರ್ಯಕ್ರಮದಲ್ಲಿ ಖುದ್ದಾಗಿ ನಾವೇ ನೂರಾರು ಜನ ಶರಣರೊಂದಿಗೆ ಹೋಗಿ ಮನವಿ ಕೊಟ್ಟಿದ್ದೇವೆ, ಅತ್ಯಂತ ಸಕಾರಾತ್ಮಕವಾಗಿ ಸ್ಪಂದಿಸಿ ಸ್ಥಳದಲ್ಲಿಯೇ ಈ ಕುರಿತು ತನಿಖೆ ನಡೆಸಿ ಒಂದು ವಾರದೊಳಗೆ ತಮಗೆ ವರದಿ ಸಲ್ಲಿಸಬೇಕೆಂದು ಆದೇಶ ಮಾಡಿದರು. 3 ವಾರ ಕಳೆದವು 3 ಬಾರಿ ಸಚಿವರು ತಿಳಿಸಿದರು ಇಲ್ಲಿಯವರೆಗೆ ಜಿಲ್ಲಾಧಿಕಾರಿ ಯಾವುದೇ ಕ್ರಮ ತಗೆದುಕೊಂಡಿಲ್ಲ. ಇದರ ಹಿಂದಿನ ರಹಸ್ಯ ಏನೆಂಬುದು ಬಯಲಾಗಬೇಕು. ಇದೇ ರೀತಿಯಾಗಿ ತಾಳ್ಮೆ ಪರೀಕ್ಷೆ ಮಾಡುತ್ತ ಹೋದರೆ, ಕೋಟಿ ಕೋಟಿ ಬಸವ ಭಕ್ತರು ರೊಚ್ಚಿಗೆದ್ದು ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮೊದಲು ಜಿಲ್ಲಾ ಆಡಳಿತ ಎಚ್ಚೆತ್ತುಕೊಳ್ಳಲಿ. ಇಲ್ಲವಾದರೆ, ಲೋಕಾಯುಕ್ತಕ್ಕೆ ದೂರು ಸಲ್ಲಿಸಲು ಮತ್ತು ಬೀದರ ನಗರದಲ್ಲಿ ಲಕ್ಷಾಂತರ ಜನರಿಂದ ಬೃಹತ್ ಪ್ರತಿಭಟನೆ 'ಬೀದರ್‌ಬಂದ್' ರೂಪುರೇಷೆ ರೂಪಿಸಲಾಗುವುದು ಈ ಮೂಲಕ ಜಿಲ್ಲಾ ಆಡಳಿತಕ್ಕೆ ಎಚ್ಚರಿಸಲಾಗಿದೆ.

ಯಾವುದೇ ಕಾರಣಕ್ಕೂ ಬಸವ ಪುತ್ಥಳಿಯ ಮುಂದೆ ಬಡಾವಣೆ ನಿರ್ಮಾಣವಾಗಲಿಕ್ಕೆ ಬಿಡುವುದಿಲ್ಲ ಎಂದು ಬಸವ ಭಕ್ತರು ಸಂಕಲ್ಪ ಮಾಡಿದ್ದಾರೆ. ಜಿಲ್ಲಾ ಆಡಳಿತ ಬೇಗನೆ ಎಚ್ಚೆತ್ತು ಯೋಜನೆಯನ್ನು ರದ್ದು ಪಡಿಸಲಿ.

ಇಷ್ಟಲಿಂಗೋಪಾಸನೆ ವೈಜ್ಞಾನಿಕ ಅರಿವು

ಶ್ರೀ ಬಸವ ಕುಮಾರ ಸ್ವಾಮೀಜಿ



ಇಷ್ಟಲಿಂಗದ ಅವಶ್ಯಕತೆ :-

"ಹಾಡಿದೊಡೆ
ಎನ್ನೊಡೆಯನ ಹಾಡುವೆ,
ಬೇಡಿದೊಡೆ ಎನ್ನೊಡೆಯನ ಬೇಡುವೆ
ಒಡೆಯಂಗೊಡಲ ತೋರಿ
ಎನ್ನ ಬಡತನವ ಬಿನ್ನಯಿಸುವೆ.
ಒಡೆಯ ಮಹಾದಾನಿ ಲಿಂಗದೇವಂಗೆ
ಸೆರಗೊಡ್ಡಿ ಬೇಡುವೆ"

ಈ ವಚನದಲ್ಲಿ ಪ್ರಾರ್ಥನೆಯ ಮೂಲಕ ದೇವನಿಗೆ ಬೇಡಿಕೆಯನ್ನು ಇಟ್ಟಿದ್ದಾರೆ. ಲೌಕಿಕ ಜೀವನದಲ್ಲಿ ನಮ್ಮ ನಮ್ಮ ಪೂರ್ವಜನ್ಮದ ಕರ್ಮಾನುಸಾರ ಸುಖ-ದುಃಖ, ಪಾಪ-ಪುಣ್ಯ, ಒಳ್ಳೆಯದು-ಕೆಟ್ಟದ್ದು, ಮಾನ-ಅಪಮಾನ, ರಾಗ-ದ್ವೇಷ, ಮೇಲು-ಕೀಳು, ಚಿಕ್ಕವರು-ದೊಡ್ಡವರು, ಹೆಣ್ಣು-ಗಂಡು, ರೋಗ-ರುಜಿನಗಳೆಂಬ ದ್ವಂದ್ವಗಳು ಬಂದು ಹೋಗುತ್ತಿರುತ್ತವೆ. ಈ ಸಂದರ್ಭಗಳಲ್ಲಿ ನಮ್ಮ ಶಕ್ತಿ ಇವನ್ನು ಎದುರಿಸಲು ಕಷ್ಟವಾಗುತ್ತದೆ. ಆದರೆ ಈ ಜಗತ್ತಿನಲ್ಲಿ ಒಂದು ವಿಶೇಷವಾದ ದೈವೀ ಶಕ್ತಿಯು ತನ್ನ ಪ್ರಭಾವವನ್ನು ಬೀರುತ್ತಿರುತ್ತದೆ.

ಇಂಥ ಶಕ್ತಿಗೆ ಮೊರೆ ಹೋದಾಗ ಭಾರವಾದ ಜೀವನ ಹಗುರಾಗುವುದು. ದುಃಖದ ಪ್ರಸಂಗಗಳು ಕಡಿಮೆಯಾಗುವುವು. ಪಾಪಕಾರ್ಯಗಳು ಕ್ಷೀಣವಾಗುವುವು. ಕೆಟ್ಟಕಾರ್ಯಗಳು ಘಟಿಸದೇ ಒಳ್ಳೆಯ ಕಾರ್ಯಗಳು ಹೆಚ್ಚಾಗುವುವು. ಅವಮಾನವಾಗುವ ಪ್ರಸಂಗಗಳು ವಿರಳವಾಗಿ ಎಲ್ಲ ಕಡೆಯಿಂದಲೂ ಗೌರವಯುಕ್ತವಾದ ಸನ್ಮಾನಗಳು ಪ್ರಾಪ್ತಿಯಾಗುವುವು. ದ್ವೇಷ ಭಾವನೆ ಅಳಿದು ಎಲ್ಲರನ್ನು ಪ್ರೀತಿಸುವಂತಾಗುವುದು. ಕೀಳರಿಮೆಯು ನಶಿಸಿ ನಾನೊಬ್ಬನೇ ದೊಡ್ಡವನೆಂಬುದು, ದೊಡ್ಡಸ್ತಿಕೆಯೂ ಮಾಯವಾಗಿ ಎಲ್ಲರೂ ಸರಿ ಸಮಾನರೆಂಬ ಭಾವ ಮೈದೋರುವುದು.

ಶತ ಶತಮಾನಗಳಿಂದ ಹೆಣ್ಣು ಶೂದ್ರಳು, ಕೀಳು, ಧರ್ಮಕ್ಕೆ ಅನರ್ಹಳು, ಹೆಣ್ಣುಮಕ್ಕಳ ಬುದ್ಧಿ ಮೊಣಕಾಲು ಕೆಳಗೆ, ಅಡಿಗೆ ಮನೆಯ ಆಳು, ಮನೆಯ ಹೊಸ್ತಿಲು ಒಳಗೇ ಇದ್ದು ಹೊರಗಡೆ ಹೋಗುವಂತಿಲ್ಲಾ ಎಂಬುದು ಮನೆ ಮಾಡಿತ್ತು, ಶಾಪಗ್ರಸ್ತರು, "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂಬ ಮನುಸ್ಮೃತಿ ಹೇಳಿಕೆ, ಬಾಲ್ಯದಲ್ಲಿ ತಾಯಿಯ ಆಶ್ರಯ, ಸ್ವಲ್ಪ ದೊಡ್ಡರಾದಾಗ ತಂದೆ ಆಶ್ರಯ, ಯೌವನಕ್ಕೆ ಬಂದಾಗ ಗಂಡನ ಆಶ್ರಯ, ಮುಪ್ಪಾವಸ್ಥೆಯಲ್ಲಿ ಮಕ್ಕಳ ಆಶ್ರಯದಲ್ಲಿರಬೇಕೆಂಬುದು ಮನುಶಾಸ್ತ್ರ, ಈ ಎಲ್ಲ ಶೃಂಖಲೆಗಳನ್ನು ತೊಡೆದು ಹಾಕಿ ಸ್ತ್ರೀಯಲ್ಲಿಯೂ ಆತ್ಮ ಇದೆ.

ಅರ್ಧನಾರೀಶ್ವರ ಎಂಬುದು ಶಿವನಿಗೆ ಬಿರುದು. ಸ್ತ್ರೀಯರೂ ಸಹಿತ ಧಾರ್ಮಿಕವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಹೊರಗೆ-ಒಳಗೆ ಸಮಾನ ಹಕ್ಕಿಗೆ ಬಾಧ್ಯಸ್ತರು ಅಂತಾ ಗುರು ಬಸವಣ್ಣನವರು ಪ್ರತಿಪಾದಿಸಿ ಮಹಿಳಾ ಕುಲಕ್ಕೆಲ್ಲ ಸ್ವಾತಂತ್ರ್ಯ ಎಲ್ಲ ವಿಧದಲ್ಲಿಯೂ ದೊರೆಯಬೇಕು ಹಾಗೂ ದೊರಕಿಸಿ ಕೊಡಬೇಕೆಂಬ ದಿವ್ಯ-ಭವ್ಯವಾದ ಮಣಿಹವನ್ನು ಹೊತ್ತು ದ್ವಿಜ



ಸಂಸ್ಕಾರ ನನಕ್ಕಿಂತಲೂ ಮೊದಲು ನನ್ನ ಅಕ್ಕ ನಾಗಲಾಂಬಿಕೆಗೆ ಕೊಡಿರಿ ಎಂದು ಪಟ್ಟಹಿಡಿದರು. ತಿಂಗಳಿಗೊಮ್ಮೆ ರಜಸ್ವಲೆಯಾಗುವಳು ಆಕೆ ಅಪವಿತ್ರಳು ಧರ್ಮ (ದ್ವಿಜ) ಸಂಸ್ಕಾರಕ್ಕೆ ಅನರ್ಹಳು ಜನಿವಾರ ಕೊಡುವಂತಿಲ್ಲ. ಗಾಯತ್ರಿ ಮಂತ್ರೋಪದೇಶ ಮಾಡುವಂತಿಲ್ಲ. ಪುರುಷನ ಸಮಾನ ಸ್ಥಾನಮಾನ ಕೊಡಲಿಕ್ಕೆ ಬರುವುದಿಲ್ಲ ಅಂತಾ ತಂದೆ ಮತ್ತು ಶಾಸ್ತ್ರೀಗಳು ಹೇಳಿದಾಗ ಬಾಲಕ ಬಸವರಸರು ಶಾಸ್ತ್ರೀಗಳನ್ನು ಪ್ರಶ್ನಿಸುತ್ತಾರೆ. ದ್ವಿಜ ಸಂಸ್ಕಾರ ಅಂದರೇನು? ಈ ಎರಡು ಕಣ್ಣುಗಳ ಜೊತೆಗೆ ಇನ್ನೊಂದು ಜ್ಞಾನದ-ಅರಿವಿನ-ದೈವೀದೃಷ್ಟಿಯನ್ನು ಕರುಣಿಸುವಂಥದು.

ಮೂರು ಎಳೆ ಜನಿವಾರ ಹಾಕುವುದು ಹಾಗೂ ಗಾಯತ್ರಿ ಮಂತ್ರೋಪದೇಶ ಮಾಡುವುದು. ಆಗ ಬಾಲಕ ಬಸವರಸರು ಮತ್ತೆ ಪ್ರಶ್ನಿಸುತ್ತಾರೆ-ಶಾಸ್ತ್ರಿಗಳೆ ನಿಮ್ಮ ಕೊರಳಲ್ಲಿ ಮೈಮೇಲೆ ಆರು ಎಳೆ ಜನಿವಾರ ಹಾಕಿಕೊಂಡಿದ್ದೀರಿ ಕಾರಣವೇನು? ಎಂದಾಗ ಲಗ್ನವಾದ ಮೇಲೆ ನನ್ನ ಹೆಂಡತಿಯ ಮೂರು ಎಳೆ ಜನಿವಾರವನ್ನು ನಾನೇ ಹಾಕಿಕೊಂಡಿದ್ದೇನೆ. ಹಾಗಾದರೆ ನಿಮ್ಮ ಹೆಂಡತಿಯ ಊಟವನ್ನು ನೀವೇ ಮಾಡುತ್ತೀರಾ? ಇಲ್ಲಾ, ಅವರವರ ಹೊಟ್ಟೆಗೆ ಅವರೇ ಊಟಾ ಮಾಡುವುದು. ಅದೇ ರೀತಿ ಅವರವರ ಆತ್ಮೋದ್ಧಾರ ಅವರೇ ಮಾಡಿಕೊಳ್ಳಬೇಕಾಗುತ್ತದೆ ಅಲ್ಲವೇ? ಕಾರಣ, ಮೊದಲು ಅಕ್ಕನಿಗೆ ದ್ವಿಜ ಸಂಸ್ಕಾರ ಕೊಡಿರಿ ಆಮೇಲೆ ನನಗೆ ಕೊಡಿ ಅಂದಾಗ ಕೊಡಲಿಕ್ಕೆ ಬರಲ್ಲ. ಹಾಗಾದರೆ ನನಗೆ ಬೇಡಾ, ನನ್ನ ಅಂತರಾತ್ಮಾ ಒಪ್ಪುತ್ತಿಲ್ಲಾ. ಸಂಪ್ರದಾಯಕ್ಕಿಂತ, ಸತ್ಯ ಶ್ರೇಷ್ಠ, ಸತ್ಯಕ್ಕಿಂತ ಕಲ್ಯಾಣ ಶ್ರೇಷ್ಠ ಎಂಬ ಹಿತೋಕ್ತಿ ಇದೆಯಲ್ಲವೇ? ತಂದೆ ಮಾದರಸ ಕೋಪದಿಂದ ಕೊಡಲಿಕ್ಕೆ ನಾನಾರು ತೆಗೆದುಕೊಳ್ಳಲು? ಮೇಲೆ ಸಂಪ್ರದಾಯದ ಪ್ರಕಾರ ನಡೆದುಕೊಳ್ಳಬೇಕು, ಇಲ್ಲದಿದ್ದರೆ ನನ್ನ

ಮಗ ನೀನಲ್ಲ, ನಿನಗಿಲ್ಲಿ ತಾವಿಲ್ಲ, ಮನೆ ಬಿಟ್ಟು ಹೋಗು. ಅಂದಾಗ ಹಾಗೆ ಆಗಲಿ ಅಪ್ಪಾ, ಶಿವನೇ ನನ್ನ ತಂದೆ-ತಾಯಿ, ಬಂಧು ಬಳಗ ಹೊರಡುತ್ತೇನೆಂದು ಮುಂದಾದಾಗ ಪ್ರೀತಿಯ ಅಕ್ಕ ಸುಮ್ಮನೇ ಕುಳಿತ್ತಿದ್ದಳು.

ತಾಯಿ ಮಾದಲಾಂಬಿಕೆ ಮಗಳಿಗೆ ಹೇಳುತ್ತಾಳೆ, ಏನು? ಇಷ್ಟು ಪ್ರೀತಿಯ ತಮ್ಮ ಮನೆ ಬಿಟ್ಟು ನಡೆದಿದ್ದಾನೆ ನೀನು ಕಲ್ಲು ಹೃದಯಾಗಿದ್ದಿಯಾ? ಆಗ ಅಕ್ಕನಾಗಲಾಂಬಿಕೆ, ಹೋಗಲಿ ಬಿಡು ಅಮ್ಮಾ ಸ್ವಚ್ಛಂದವಾಗಿ ಆಧ್ಯಾತ್ಮಿಕತೆಯ ಆಕಾಶದಲ್ಲಿ ಹಾರಲಿ ಬಿಡು. ಹೆತ್ತ ಕರುಳು, 12 ವರ್ಷಗಳ ವರೆಗೆ ದೇವರಲ್ಲಿ ಹರಕೆ ಹೊತ್ತು, ವ್ರತ ನೇಮಗಳನ್ನು ಮಾಡಿ ದೈವೀ ಕಾರುಣ್ಯ ಪಡೆದು ಹುಟ್ಟಿದ ಮಗ ಎಂದು ತಿಳಿದು ಮಗನಿಗೆ, ಏನು ಮಗು ಶಾಸ್ತ್ರವನ್ನು ಮರೆತೆಯಾ? "ಮಾತೃ ದೇವೋಭವ, ಪಿತೃ ದೇವೋಭವ" ಎಂಬುದನ್ನು? ಅಮ್ಮಾ ನಿನಗಾಗಿ, ಜಗತ್ತಿನ ಎಲ್ಲ ಹೆಣ್ಣು ಮಕ್ಕಳಿಗೆ ಮುಕ್ತವಾಗಿ ಧರ್ಮದೀಕ್ಷೆ ಸಾಮಾಜಿಕ ನ್ಯಾಯ ಸಿಗಬೇಕೆಂದು ಹೊರಟಿದ್ದೇನೆ ಎಂದು, ಒಂದು ಅಮೂಲ್ಯವಾದ ಸಂದೇಶವನ್ನು ತಾಯಿಗೆ ಹೇಳುವುದರೊಂದಿಗೆ ಜಗತ್ತಿನ ಜನರಿಗೆಲ್ಲ ಉಪದೇಶ ಅದಾಗಿತ್ತು.

"ಕಾಗೆ, ಗೂಡು ಕಟ್ಟುತ್ತೆ. ಕೋಗಿಲೆಗೆ ಗೂಡು ಕಟ್ಟಲು ಬರಲ್ಲ. ಕಾಗೆನೂ ಕಪ್ಪು, ಕೋಗಿಲೆಯೂ ಕಪ್ಪು. ಕೋಗಿಲೆ ತನ್ನ ಮೊಟ್ಟೆಗಳನ್ನು ಕಾಗೆ ಇಲ್ಲದ ಸಮಯದಲ್ಲಿ ಗೂಡಿನಲ್ಲಿ ಮೊಟ್ಟೆಗಳನ್ನಿಟ್ಟು ಹಾರಿ ಹೋಗುವುದು. ಮಳ್ಳ ಕಾಗೆಗೆ ಮೆಥೆಮೆಟಿಕ್ಸ್ ಗೊತ್ತಿಲ್ಲಾ 2+2=4 ಅಂತಾ. ತನ್ನ ಮೊಟ್ಟೆಯ ಜೊತೆಗೆ ಕೋಗಿಲೆಯ ಮೊಟ್ಟೆಗಳಿಗೂ ಕಾವು (ಬಿಸಿ) ಕೊಡುತ್ತೆ. ಕೆಲವಾರು ದಿವಸಗಳಾದ ಮೇಲೆ ಮೊಟ್ಟೆಯೊಡೆದು ಅದರೊಳಗಿನಿಂದ ಮರಿಗಳು ಹೊರಬರುತ್ತವೆ. ಎಲ್ಲ ಮರಿಗಳು ಹೊರಬರುತ್ತವೆ. ಎಲ್ಲ ಮರಿಗಳು ಕಪ್ಪಾಗಿವೆ. ಹೊರಗಡೆಯಿಂದ ಆಹಾರವನ್ನು ತಂದು ಗೂಡಿನಲ್ಲಿದ್ದ ಎಲ್ಲ ಮರಿಪಕ್ಷಿಗಳಿಗೆ ಬಾಯಿಂದ ಬಾಯಿಗೆ ಉಣಿಸುತ್ತಾ ಹೊಗುತ್ತೆ. ನಂತರ ಪಕ್ಷಿಗಳಿಗೆ ರೆಕ್ಕೆ-ಪುಕ್ಕ ಬಲಿದು ದೊಡ್ಡದಾದಾಗ ಕಾಗೆಮರಿಗಳು ಕಾಕಾ ಎನ್ನುತ್ತವೆ. ಅದರಲ್ಲಿಯೇ ಇದ್ದು ಬೆಳೆದಂತಹ ಕೋಗಿಲೆ ಮರಿಗಳು ಮಾಘ ಮಾಸ ಕಳೆದು ಚೈತ್ರ ಮಾಸ ಬಂದಾಗ ಮಾವಿನ ಮರದ ಚಿಗುರೆಲೆಗಳನ್ನು ತಿಂದು ಕುಹು... ಕುಹು ಎಂದಾಗ, ಆ ಧ್ವನಿಯನ್ನು ಕೇಳಿದ ಕಾಗೆ ನನ್ನ ಮರಿಗಳು ನೀವು ಕಾ......ಕಾ ಅನ್ನಬೇಕು ಅಂದಾಗ, ಕೋಗಿಲೆ ಮರಿಗಳು ಹೇಳುತ್ತವೆ, ನಾವು ಪರಪುಟ್ಟ ಕೋಗಿಲೆ ಮರಿಗಳು, ಕುಹು....ಕುಹು ಅನ್ನುತ್ತೇವೆ. ಈ ಸಮಯದಲ್ಲಿ ಕಾಗೆ ಕುಕ್ಕಿ-ಕುಕ್ಕಿ ಹೊರಗೆ ಹಾಕುತ್ತೆ. ಕೋಗಿಲೆ ಮರಿಗಳಿಗೆ ರೆಕ್ಕೆ-ಪುಕ್ಕ ಬಲಿತಿರುತ್ತವೆ ಹಾರಿ ಬಯಲು ಆಕಾಶದಲ್ಲಿ ತೇಲಾಡುತ್ತವೆ.

ಅದರಂತೆ ಅಮ್ಮಾ, ಪರಮಾತ್ಮನೆಂಬ ಕೋಗಿಲೆ, ತಂದೆ ತಾಯಿಯ ಮನೆ ಅನ್ನುವಂತಹ ಕಾಗೆ ಗೂಡಿನಲ್ಲಿ ನನ್ನನ್ನು ಇಟ್ಟಿದ್ದನು. ನನಗೆ ಈಗ ಜ್ಞಾನೋದಯವಾಗಿದೆ. ನಾನು ಆಧ್ಯಾತ್ಮದ ಆಕಾಶದಲ್ಲಿ ಸ್ವಚ್ಛಂದವಾಗಿ ಹಾರಾಡಲು ಹೊರಡುತ್ತೇನೆ ನಮಸ್ಕಾರ ಅಂತಾ ಹೊರಟೇ ಬಿಟ್ಟರು ಬಾಲಕ ಬಸವಣ್ಣ. ದೇಹವನ್ನು ಹೊತ್ತು ಬಂದ ಮೇಲೆ ಸ್ತ್ರೀ-ಪುರುಷರಿಗೆ ಸಮಾನವಾಗಿ ರೋಗ ರುಜಿನಗಳು ಆವರಿಸುವವು. ಈ ಸಂದರ್ಭದಲ್ಲಿ ದೈವೀ ಮಹಾನ್ ಶಕ್ತಿಗೆ ಮೊರೆ ಹೊಕ್ಕಾಗ ದೇಹದ ಸಂಕಷ್ಟಗಳನ್ನು ಸ್ವೀಕರಿಸಿ ಅವನ್ನು ಶಾಂತಮನಸ್ಸಿನಿಂದ ಅನುಭವಿಸುವ ಶಕ್ತಿ ಪ್ರಾಪ್ತವಾಗುವುದು. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಒಂದೇ. ಸೃಷ್ಟಿಕರ್ತ ಪರಮಾತ್ಮನನ್ನು ಮನತುಂಬಿ ಹಾಡಿ ಹೊಗಳುವುದು. ನಮ್ಮ ಜೀವನವಕ್ಕೆ ಬೇಕಾದ ಲೌಕಿಕ-ಪಾರಮಾರ್ಥಿಕ ಬೇಡಿಕೆಗಳನ್ನು ಸಲ್ಲಿಸುವುದು. ಸರ್ವಾರ್ಪಣ ಮನೋಭಾವದಿಂದ ದೇವನಿಗೆ ಶರಣಾದಾಗ ಎಲ್ಲವನ್ನು ಕೊಟ್ಟು ಸಲಹುವ ಜವಾಬ್ದಾರಿ ದೇವನದಾಗುವುದು.

ಮೈ-ಮಾತು-ಮನಸ್ಸುಗಳಿಂದ ಪೂಜೆ-

ಪುಟ 15ರಲ್ಲಿ ಮುಂದುವರಿಯುವುದು

ಮಹಾನ್ ಶರಣ

ವೀರಮಾತೆ ಅಕ್ಕ ನಾಗಲಾಂಬಿಕೆ



ತಾ ಮಾಡಿದ ಹೆಣ್ಣು ತನ್ನ ತಲೆಯನ್ನೇರಿತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತು
ಅದು ಕಾರಣ ಹೆಣ್ಣು ಹೆಣ್ಣಲ್ಲ ಹೆಣ್ಣು
ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲ
ಸಿದ್ಧಮಲ್ಲಿಕಾರ್ಜುನಾ"...

ಎಂಬ ಸಿದ್ಧರಾಮೇಶ್ವರರ ವಚನವಾಣಿಯಂತೆ...ಹೆಣ್ಣು ಗಂಡಿನ ಸಮಾನಳು ಎಂದು ಕಲ್ಯಾಣ ಕ್ರಾಂತಿಯ ನಂತರ ಜಾತಿವಾದಿಗಳು ವಚನ ಸಾಹಿತ್ಯ ನಾಶಮಾಡಲು ಸನ್ನದ್ಧರಾದಾಗ ಅವರೊಡನೆ ಕಾದಾಡಿ ವಚನ ವಾಙ್ಮಯ ನಿಧಿಯನ್ನು ಉಳಿಸಿಕೊಟ್ಟ ಶರಣರಲ್ಲಿ ವೀರಮಾತೆ ಅಕ್ಕ ನಾಗಲಾಂಬಿಕೆ ಕೂಡಾ ಒಬ್ಬರು. ಅಕ್ಕ ನಾಗಲಾಂಬಿಕೆ ಬಾಗೇವಾಡಿ (ಇಂಗಳೇಶ್ವರ)ದಲ್ಲಿ ಜನಿಸಿದರು. ತಂದೆ ಮಾದರಸ, ತಾಯಿ ಮಾದಲಾಂಬಿಕೆ ಹಾಗೂ ತಮ್ಮ ವಿಶ್ವಗುರು ಬಸವಣ್ಣನವರು. ಇವರ ಇನ್ನೊಂದು ಹೆಸರು ನಾಗಮ್ಮ ಎಂದು. ಶಿವದೇವ ಅವರಿಗೆ ಇವರನ್ನು ಮದುವೆ ಮಾಡಲಾಯಿತು.

ಬಸವಣ್ಣವರು ಬಾಲ್ಯ ಕಳೆದಿದ್ದು ನಾಗಲಾಂಬಿಕೆ ಮತ್ತು ಶಿವಸ್ವಾಮಿ ಜೊತೆಯಲ್ಲಿಯೇ. 8ನೇ ವಯಸ್ಸಿನಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ಜನಿವಾರ ಹಾಕಲು ಬಂದಾಗ, ಹಿರಿಯಳಾದ ಅಕ್ಕ ನಾಗಲಾಂಬಿಕೆಗೆ ಮೊದಲು ಕೊಡಲು ಬಸವಣ್ಣನವರು ಕೇಳುತ್ತಾರೆ. ಇದು ಪುರುಷರಿಗೆ ಮಾತ್ರ ಎಂದಾಗ ಮಹಿಳೆ ಅಸಮಾನತೆ ವಿರೋಧಿಸಿ ಬಸವಣ್ಣನವರು ಮನೆಯಿಂದ ನಿರ್ಗಮಿಸಿ ಕೂಡಲಸಂಗಮಕ್ಕೆ ಹೊರಡುತ್ತಾರೆ.

ಅಕ್ಕ ನಾಗಲಾಂಬಿಕೆ ಮತ್ತು ಶಿವಸ್ವಾಮಿ ಅವರ ಮುದ್ದಿನ ಮಗನೇ ಚಿನ್ಮಯಜ್ಞಾನಿ ಚನ್ನಬಸವಣ್ಣ. ಇವರು ಕಲ್ಯಾಣ ಕ್ರಾಂತಿಯ ನಂತರ ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲೂಕಿನ ಹತ್ತಿರ ಎಣ್ಣೆಹೊಳೆ ಎಂದು ಪ್ರಸಿದ್ಧವಾಗಿರುವ ಪ್ರದೇಶದಲ್ಲಿ ಉಳಿದರು. ಕೆಲ ಕಾಲ ಅಲ್ಲೇ ಅನುಷ್ಠಾನ ಮಗ್ನರಾಗಿ ತರೀಕೆರೆಯಲ್ಲಿ ಲಿಂಗೈಕ್ಯರಾದರು. ಇಂದಿಗೂ ಅಲ್ಲಿ ಅಕ್ಕನಾಗಮ್ಮನವರ ಸಮಾಧಿಯುಂಟು.

ಸಮಗ್ರ ವಚನ ಸಂಪುಟದಲ್ಲಿ ಇವರು ರಚಿಸಿ ಸಿಕ್ಕಿರುವ 14 ವಚನಗಳನ್ನು ಮಾತ್ರ ಪ್ರಕಟಿಸಲಾಗಿದೆ. ಇವರ ವಚನಗಳ ಅಂಕಿತ ನಾಮ ಬಸವಪ್ರೀಯ ಚೆನ್ನಸಂಗಯ್ಯ.

ಇಷ್ಟಲಿಂಗೋಪಾಸನೆ

ವೈಜ್ಞಾನಿಕ ಅರಿವು

ಪ್ರಾರ್ಥನೆ-ಧ್ಯಾನಗಳನ್ನು ಪೂರೈಸುವುದು ಪರಿಪೂರ್ಣವಾದಂಥ ಯೋಗ.

ಪೂಜೆ ಮಾಡುವುದು ಯಾವುದನ್ನು? ಜಗತ್ತಿನಲ್ಲೆಲ್ಲ ಓತಪ್ರೋತವಾಗಿ ತುಂಬಿ ತುಳುಕುತ್ತಿರುವುದನ್ನು. ಜಗದಗಲ ಮುಗಿಲಗಲ............ಜಗತ್ತಿನಲ್ಲಿ ಓತಪ್ರೋತವಾಗಿ ತುಂಬಿರುವುದು. Atomological Meaning of Linga. ಲಿಂಗದ ವಿವರಣೆ ಹೀಗಿದೆ:- ಯಾವುದರಲ್ಲಿ ಈ ಜಗತ್ತು ಹೊರಹೊಮ್ಮಿದೆಯೋ? ಯಾವುದರಲ್ಲಿ ಜಗತ್ತು ಲೀಲೆಯಾಡುವುದೋ?(ಸ್ಥಿತಿ) ಯಾವುದರಲ್ಲಿ ಈ ಜಗತ್ತು ಅಂತಿಮವಾಗಿ ಲಯವಾಗುವುದೋ? ಅದಕ್ಕೆ ಲಿಂಗ ಪರಬ್ರಹ್ಮ-ಪರಶಿವ-ಪರವಸ್ತು-ಪರಾತ್ಪರ ವಸ್ತು ಎಂದು ಕರೆಯುತ್ತಾರೆ. ಇಂಥಹ ಒಂದು ವಿಶೇಷವಾದಂತಹ ತತ್ವ ಸಿದ್ಧಾಂತವನ್ನು ಸಾಕಾರಗೊಳಿಸಿ ಇಷ್ಟಲಿಂಗವನ್ನಾಗಿ ರೂಪಿಸಿ ಕೊಟ್ಟರು ಗುರು ಬಸವಣ್ಣನವರು. ಇಂಥಹ ಇಷ್ಟಲಿಂಗ ಪೂಜೆ ಮಾಡಲು ಹೇಳಿದರು.

ಜಗದಗಲ-ಮುಗಿಲಗಲ-ಮಿಗೆಯಗಲ-ನಿಮ್ಮಗಲ, ಹಿಮಾಲಯ ಪರ್ವತ, ಪ್ಯಾಶಿಪಿಕ್ ಸಮುದ್ರ ಎಷ್ಟು ದೊಡ್ಡದಿದಾವೆ ಎಂದರೆ ಅದರಷ್ಟೇ ದೊಡ್ಡವಿದ್ದಾವೆ ಎಂದು ಹೇಳಬೇಕು. ಅದರಂತೆ ಪರಮಾತ್ಮನು, ಉದ್ದಗಲಕ್ಕೆ ಅಳತೆಯಿಲ್ಲದಷ್ಟು ಜಗತ್ತು ಇದೆಯೋ ಅದೇ ರೀತಿ ಇದ್ದಾನೆ. ನಾವು ಮೇಲೆ ಕಣ್ಣಾಡಿಸಿ ಸುತ್ತಲೂ ಜಗತ್ತಿನ ಯಾವುದೇ ಮೂಲೆಯಲ್ಲಿ ಹೋದರೂ ನೋಡಿದಾಗ ಭೂಮಿಗೆ ಹತ್ತಿದ ಹಾಗೆನೆ ಗೋಚರಿಸುತ್ತದೆ. ಆದರೆ ಅದಕ್ಕೂ ಸಹ ಉದ್ದಗಲಕ್ಕೆ ಹಾಗೂ ಎತ್ತರಕ್ಕೆ ಅಳತೆಯಿಲ್ಲದಷ್ಟು ಇದೆಯೋ, ಅದೇ ರೀತಿ ಪರಮಾತ್ಮನಿದ್ದಾನೆ, ಮಿಗೆಯಗಲ ಅಂದರೆ ಊಹೆಗೆ ಬಾರದಷ್ಟು ಅಗಲನಾಗಿದ್ದಾನೆ ಪರಮಾತ್ಮನು. ಕೊನೆಗೆ, ಪರಮಾತ್ಮನೆ ಎಷ್ಟು ದೊಡ್ಡವನಿದ್ದಿಯಾ? ಎಂದರೆ ನಿನ್ನಷ್ಟೆ ನೀನು ದೊಡ್ಡಾತನಿದ್ದಿಯಾ. ಪರಮಾತ್ಮನು ಸ್ಥಾವರಲಿಂಗವೂ ಅಲ್ಲ. ಚರಲಿಂಗವೂ ಅಲ್ಲ. ಅವನ ಪಾದಗಳು ಪಾತಾಳದಿಂದ ಅತ್ತತ್ತ. ಅದೇ ರೀತಿ-ಅವನ ಶಿರಸ್ಸು ಇಡಿ ಬ್ರಹ್ಮಾಂಡದಿಂದ ಅತ್ತತ್ತ. ಕೆಲವು ವಚನಗಳಲ್ಲಿ ಬರುತ್ತೆ. ಕೆಳಗೆ ಏಳು ಲೋಕ, ಮೇಲೆ ಏಳು ಲೋಕ.

"ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ" ನುಡಿದಿದ್ದು ಸತ್ಯ ಮಾತು. ತುಲನೆ ಮಾಡಿ ಹೇಳಲಿಕ್ಕೆ ಬರುವುದಿಲ್ಲ ಅದು ಪರಬ್ರಹ್ಮ-ಪರಶಿವ Absolute Reality. ಬ್ರಹ್ಮ ಅಂದರೆ ದೊಡ್ಡದು ಪರಬ್ರಹ್ಮ ಅಂದರೆ ಅತೀ ಶ್ರೇಷ್ಠವಾದಂಥದ್ದು ಊಹೆಗೆ ಮೀರಿದ್ದು. ಇನ್ನು ಶಿವನೆಂದರೆ ಐತಿಹಾಸಿಕ ಶೈವ ಧರ್ಮದ ಧೃಷ್ಟಾರ, ಜಗತ್ತಿನ ಪ್ರಪಥಮ ಯೋಗಿ, ಪ್ರಪ್ರಥಮ ನಟ-ರಾಜ, ಪ್ರಪ್ರಥಮ ಸಂಗೀತಗಾರ, ಸಾತ್ವಿಕ ಸರಳ ಮಂಗಲದಾಯಕ ಸಾಕಾರ. ಆದರೆ ಪರಶಿವನೆಂದರೆ ನಿರಾಕಾರ, ನಿರಂಜನ, ನಿರವಯುವ ಶಿವ, ಪರಂಜ್ಯೋತಿ ಸ್ವರೂಪ, ಅಣೋರಣಿಯಾಣ್, ಮಹತೋಮಹಿಯಾನ ಎಂಬ ವಿಶಿಷ್ಟವಾದ ಗುಣಗಳಿಂದ ಶೋಭಿಸುವಂಥವನು.

ಇಂಥಹ ಪರಮಾತ್ಮನನು ಪರಶಿವನನ್ನು, ಲಿಂಗದೇವನನ್ನು ಗುರು ಬಸವಣ್ಣನವರು 1155 ಜನವರಿ 14 ರಂದು ವೈಜ್ಞಾನಿಕ. ವೈಚಾರಿಕತೆಯ ನೆಲೆಗಟ್ಟಿನ ಮೇಲೆ ಸಂಶೋಧಿಸಿ ಯೋಗಕ್ಕೆ, ದೃಷ್ಟಿಯೋಗಕ್ಕೆ ನಿಲುಕಲೆಂದು ಹೆಣ್ಣಿನ, ಗಂಡಿನ, ಪಶು-ಪಕ್ಷಿ, ಕ್ರೀಮಿ-ಕೀಟಕ, ಗಿಡ-ಮರ, ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ತ್ರಿದೇವತೆಗಳನ್ನು ಮೀರಿದ ಪರಿಕಲ್ಪನೆಯು, ಗೋಲಾಕಾರದ ವಿಶ್ವದ ಆಕಾರದ ವಿಶ್ವಾತ್ಮನ ಕುರುಹಾದ ಇಷ್ಟಲಿಂಗವನ್ನು ಕರಸ್ಥಲಕ್ಕೆ ಚುಳುಕಾಗಿಸಿ ಕರುಣಿಸಿದರು. ಸರ್ವರಿಗೂ ಯಾವ ಭೇದಭಾವವಿಲ್ಲದೆ ಪೂಜಿಸಲಿಕ್ಕೆ ಅವಕಾಶಮಾಡಿ ಕೊಟ್ಟಿದ್ದಾರೆ.

ಮುಂದುವರಿಯುವುದು...





ಬೆಂಗಳೂರಿನಲ್ಲಿ ಬಸವ ಪಂಚಮಿ

ಸುಮಧುರ ಕ್ಷಣಗಳು










ಬೆಂಗಳೂರಿನಲ್ಲಿ ಬಸವ ಪಂಚಮಿ

ಸುಮಧುರ ಕ್ಷಣಗಳು

ಪರಪುರುಷ?!



ವಚನವಾಣಿ

ಮಾತೆ ಕಸ್ತೂರಿದೇವಿ

ಎರದ ಮುಳ್ಳಿನಂತೆ ಪರಗಂಡರೆನಗವ್ವಾ. ಸೋಂಕಲಮ್ಮೆ ಸುಳಿಯಲಮ್ಮೆ;
ನಂಬಿ ನಚ್ಚಿ ಮಾತಾಡಲಮ್ಮೆನವ್ವಾ. ಚೆನ್ನಮಲ್ಲಿಕಾರ್ಜುನದೇವನಲ್ಲದ ಗಂಡರಿಗೆ
ಉರದಲ್ಲಿ ಮುಳ್ಳುಂಟೆಂದು ನಾನಪ್ಪಲಮ್ಮೆನವ್ವಾ.

–ಜಗನ್ಮಾತಾ ಅಕ್ಕಮಹಾದೇವಿ

ಅದೊಂದು ಅತ್ತೆ–ಸೊಸೆ, ಮಕ್ಕಳು ಮೊಮ್ಮಕ್ಕಳು ಇದ್ದ ಮದ್ಯಮ ವರ್ಗದ ಕುಟುಂಬ. ಸಂಜೆ ಹೊತ್ತು ಸುಶ್ರಾವ್ಯವಾಗಿ ವಚನಗಳನ್ನು ಹಾಡುತ್ತ ಅತ್ತೆ ಬತ್ತಿ ಹೊಸೆಯುತ್ತಾ ಕುಳಿತಿದ್ದರು. ಕಾಲೇಜು ಮುಗಿಸಿ ಬಂದ ಮೊಮ್ಮಗಳು ತನ್ನ ಜಂಬದ ಚೀಲವನ್ನು ಸೋಫಾ ಮೇಲೆ ಎಸೆದು ಮುಖ ಊದಿಸಿಕೊಂಡು ದುಮುಗುಡುತ್ತಾ ಕುಳಿತಳು. ತಾಯಿ ಏಕೆ ಏನಾಯಿತು ಎಂದು ಪ್ರಶ್ನಿಸಿದಾಗ ಮಗಳು ಹೇಳಿದ್ದು ಹೀಗೆ.....

'ನಾವು 3–4 ಜನ ಗೆಳತಿಯರು ಕಾಲೇಜು ಮುಗಿಸಿ ಬರುತಿದ್ದೆವು. ದಾರಿಯಲ್ಲಿ ಕೆಲವು ಪೋಲಿ ಹುಡುಗರು ನಮ್ಮನ್ನು ಅಶ್ಲೀಲವಾಗಿ ಚುಡಾಯಿಸಲು ನಾವೆಲ್ಲ ತಿರುಗಿಬಿದ್ದೆವು. ಆದರೂ ಅವರು ಬಿಡದೆ ನಮ್ಮನ್ನು ಹಿಂಬಾಲಿದಾಗ ಭಯವಾಯಿತು. ಮತ್ತೆ ದಾರಿಯಲ್ಲಿ ಪೋಲಿಸರನ್ನು ನೋಡಿ ಅವರು ಓಡಿಹೋದರು. ನಾವು ಬೇಗ ಮನೆ ಸೇರಿದೆವು' ಎಂದು ನಡೆದ ಘಟನೆಯ ಬಗ್ಗೆ ವರದಿ ಒಪ್ಪಿಸಿದಳು.



ಇಂಥ ಅಹಿತಕರ ಘಟನೆಗಳು ಆಗಾಗ ಜರುಗುತ್ತಿದ್ದವು.

ಇದನ್ನು ಕೇಳಿದ ಅತ್ತೆ ಹೇಳಿದರು "ನೋಡು ಮಗು, ಮೊದಲು ನೀನು ಮೈತುಂಬಾ ಬಟ್ಟೆ ಹಾಕಿಕೊಂಡು ಕಾಲೇಜಿಗೆ ಹೋಗು. ಅದೇನೋ ಮೈ ಕಾಣುವಂತೆ ತುಂಡು ಶಾಟು ತೋಳಿಲ್ಲದ ಅಂಗಿ ಇಂಥದ್ದೆಲ್ಲಾ ಹಾಕಿಕೊಂಡು ದಾರಿಯಲ್ಲಿ ಹೋದರೆ ಅವರಿಗೂ ಪ್ರಚೋದನೆ ಆಗಿ ರೇಗಿಸಬೇಕು ಅಂತ ಅನಿಸುತ್ತೆ. ಮೈತುಂಬ ಬಟ್ಟೆ ಇದ್ದರೆ ಸ್ವಲ್ಪನಾದರೂ ಇಂಥ ಪ್ರಸಂಗಗಳು ಕಡಿಮೆಯಾಗಬಹುದು" ಎಂದು ತಮಗೆ ತಿಳಿದ ಉಪದೇಶ ಮಾಡಿದರು. ಅತ್ತೆಯವರ ಮಾತು ಕೇಳಿದ ಸೊಸೆ ಹೇಳಿದ್ದು ಏನು ಗೊತ್ತೆ?!

"ಸುಮ್ನಿರಿ ಅತ್ತೆ. ಸಾಕು! ನಿಮಗೇನು ತಿಳಿಯುತ್ತೆ! ನಾವು ಚಿಕ್ಕವರಿದ್ದಾಗ ಇಂಥ ಡ್ರೆಸ್ ಹಾಕಿಕೊಂಡು ಓಡಾಡುವ ಅದೃಷ್ಟ ನಮಗಿರಲಿಲ್ಲ. ಈಗ ಮಾರ್ಕೆಟಿಗೆ ಎಂತೆಂಥಾ ಚಂದದ ಡ್ರೆಸ್ ಬಂದಿವೆ ಗೊತ್ತೆ! ನಮ್ಮ ಮಕ್ಕಳಾದರೂ ಅವನ್ನು ಹಾಕಿಕೊಂಡು ಸಂತೋಷಪಡಲಿ" ಎಂದಾಗ ಸೊಸೆಯ ಅಜ್ಞಾನಕ್ಕೆ ಅತ್ತೆಗೆ ಮರುಗುವುದು ಬಿಟ್ಟು ಬೇರೇನೂ ತೋಚಲಿಲ್ಲ.

ಈಗಂತೂ ಮಹಿಳೆಯರ ವಸ್ತ್ರ ಸಂಹಿತೆ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿರುತ್ತವೆ. ಕೆಲವು ಮಹಿಳಾಪರ ಸಂಘಟನೆಗಳು ಪುರುಷರಿಗಿಲ್ಲದ ವಸ್ತ್ರ ಸಂಹಿತೆ ಮಹಿಳೆಯರಿಗೇಕೆ ಎಂದು ವಿರೋಧಿಸುತ್ತಾರೆ; ಮಾಧ್ಯಮಗಳಲ್ಲಿ ಖಂಡಿಸುತ್ತಾರೆ. ಆದರೆ ಇವರು ಇಂಥ ಸಮಸ್ಯೆಗೆ ಸೂಕ್ತ ಪರಿಹಾರ ಹುಡುಕುವ ಗೋಜಿಗೆ ಹೋಗುವುದಿಲ್ಲ ಅಥವ ಬೀದಿಕಾಮಣ್ಣರಿಲ್ಲದ ಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸಲು ಮುಂದಾಗುವುದಿಲ್ಲ. ಮಹಿಳೆಯರ ನೈತಿಕ ಭದ್ರತೆಗೆ ಅಗತ್ಯವಾದ ಉಪಾಯಗಳನ್ನು ಮತ್ತು ಕ್ರಮಗಳನ್ನು ಎಂದಿಗೂ ಸೂಚಿಸುವ ಬದ್ಧತೆ ತೋರುವುದಿಲ್ಲ. ತಮ್ಮ ವೈಯಕ್ತಿಕ ಪ್ರಚಾರಕ್ಕೆ ಮಾತ್ರ ಇವರ ಅಬ್ಬರ ಮೀಸಲು. ಬೆರಳೆಣಿಯಷ್ಟು ಸದೃಢ ಮಹಿಳೆಯರು ಮಾತ್ರ ಕರಾಟೆಯಂಥ ಆತ್ಮರಕ್ಷಣೆಯ ವಿದ್ಯೆ ಕಲಿತು ಬಚಾವಾಗಬಹುದು. ಅಲ್ಲದೆ ಈಗೀಗ ಮಾರುಕಟ್ಟೆಯಲ್ಲಿ ಮಹಿಳೆಯರ ರಕ್ಷಣೆಗೆಂದು ಪೆಪ್ಪರ್‌ಸ್ಪ್ರೇ ಯಂಥ ಸಾಧನಗಳು ಬಂದಿವೆ. ಇದೆಲ್ಲ ಹೆಣ್ಣು ಮಕ್ಕಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಮಾತಾಯಿತು.

ಪುರುಷವರ್ಗಕ್ಕೆ ಪರಸತಿಯ ಮೋಹ ತರವಲ್ಲ ಎಂದು ಉಪದೇಶಿಸಿದ ವಚನಗಳು, ಸೂಕ್ತಿಗಳು, ನಿದರ್ಶನಗಳು ಸಿಗುತ್ತವೆ. ಆದರೆ ಸ್ತ್ರೀಯರಿಗೆ ಪರಪುರುಷನ ಒಲವು ಸಲ್ಲದು ಎಂದು ಹೇಳುವ ವಚನಗಳಾಗಲಿ, ಮಾತುಗಳಾಗಲಿ ಸಿಗುವುದು ದುರ್ಲಭ. ಬದಲಿಗೆ ಪರಪುರುಷರ ಸಂಗಕ್ಕೆ ಹಾತೊರೆವ ಸ್ತ್ರೀಜಾತಿಯನ್ನು ದೂಷಿಸಿರುವುದೇ ಹೆಚ್ಚು. ಏಕೆ ಹೀಗೆ ಎಂದು ಆಲೋಚಿದಾಗ ಜಾರಸ್ತ್ರೀಯರೆಡೆಗೆ ಆಕರ್ಷಿತರಾಗುವ ಪುರುಷರದೇ ಹೆಚ್ಚಿನ ದೌರ್ಬಲ್ಯವೆನಿಸುತ್ತದೆ. ಆದ್ದರಿಂದ ಅವರಿಗೆ ಹೆಚ್ಚು ಉಪದೇಶ ಮಾಡುತ್ತಿದ್ದಾರೆ. ಇದನ್ನರಿತೇ ಜಗನ್ಮಾತಾ ಅಕ್ಕಮಹಾದೇವಿಯವರು ಪರಪುರುಷರ ಬಗ್ಗೆ ಸ್ತ್ರೀ ಜಾಗೃತಿಯ ಪರವಾಗಿ ತಾನು ಹೊಂದಿರುವ ದೃಢನಿಲುವು ಮತ್ತು ಅಳವಡಿಸಿಕೊಂಡಿರುವ ಅತ್ಯಮೂಲ್ಯವಾದ ನೀತಿ ಸಂಹಿತೆಯನ್ನು ವಚನಗಳ ಮೂಲಕ ಭೋದಿಸುತ್ತಿದ್ದಾರೆ; ಮಾರ್ಗದರ್ಶನ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಸ್ತ್ರೀಕುಲಕ್ಕೆ ಆದರ್ಶಪ್ರಾಯವಾದ ಪರಿಶುದ್ಧ ಪಾತಿವ್ರತ್ಯದ ನಿಷ್ಠೆಯನ್ನು ಬಸವಾದಿಪ್ರಮಥರು ತಮ್ಮ ವಚನಗಳಲ್ಲಿ ಸತ್–ಚಿತ್–ಆನಂದ–ನಿತ್ಯ–ಪರಿಪೂರ್ಣನಾದ ಪರಮಾತ್ಮನ ಭಕ್ತಿಗೆ ಅನ್ವಯಿಸಿ ಏಕದೇವನಿಷ್ಠೆಗೆ ಪ್ರಾಧಾನ್ಯತೆ ಕೊಟ್ಟಿದ್ದಾರೆ. ಅಲ್ಲದೆ ಹಲವು ಹಾದಿಬೀದಿಬದಿಯ ಕಾಕುಪೋಕುದೈವಂಗಳ ನಂಬಿ ಪೂಜಿಸುವವರದು ವೇಶ್ಯಾಭಕ್ತಿ

ಎಂದು ಜರಿದು ಉಗ್ರವಾಗಿ ಖಂಡಿಸಿದ್ದಾರೆ.

ರಸ್ತೆಬದಿಯಲ್ಲಿ ಬೆಳೆದ ಮುಳ್ಳಿನ ಗಿಡದಲ್ಲಿರುವ ಚೂಪಾದ ಮುಳ್ಳುಗಳು ದಾರಿಯ ಬದಿಯಲ್ಲಿ ಸಾಗುವವರಿಗೆ ಚುಚ್ಚಿ ನೋಯಿಸದೆ ಬಿಡುವುದಿಲ್ಲ. ಇದನ್ನರಿತ ಬುದ್ಧಿವಂತರು ಕೈಯಲ್ಲಿ ಕತ್ತಿಯನ್ನು ಹಿಡಿದು ಮುಳ್ಳನ್ನು ಸವರುತ್ತಾ ದಾರಿ ಮಾಡಿಕೊಂಡು ಸುರಕ್ಷಿತವಾಗಿ ಹೋಗುತ್ತಾರೆ. ಅದರಂತೆ ಪರಗಂಡರು. ಅವರಿದ್ದ ಕಡೆ ಸುಳಿಯುವುದಿಲ್ಲ; ಅವರನ್ನು ಅಪ್ಪಿತಪ್ಪಿಯೂ ಸ್ಪರ್ಶಿಸುವುದಿಲ್ಲ ಮಾತ್ರವಲ್ಲ ಅವರೊಡನೆ ನಂಬಿಕೆಯಿಂದಾಗಲಿ, ಕುತೂಹಲದಿಂದಾಗಲಿ ಅಥವ ಪ್ರೀತಿಯಿಂದಾಗಲಿ ಮಾತಾಡಿಸುವುದೂ ಇಲ್ಲ. ಅಪರಿಚಿತ ಗಂಡಸರನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಇನ್ನು ಕುರುಡು ಮೋಹದಿಂದ ಅಪ್ಪುವ ಮಾತಂತೂ ದೂರವೇ ಉಳಿಯಿತು. ನನ್ನ ತನುಮನಆತ್ಮಕ್ಕೆ ಒಡೆಯನಾದ ಚೆನ್ನಮಲ್ಲಿಕಾರ್ಜುನದೇವನಲ್ಲದ ಲೌಕಿಕ ಪುರುಷರ ಮುಖ ನೋಡಲು ನನಗಿಷ್ಟವಿಲ್ಲ ಎಂದು ತಮ್ಮ ದೃಢನಿಲುವನ್ನು ಪ್ರದರ್ಶಿಸಿದ್ದಾರೆ. ಸಾಮಾಜಿಕ ನಡವಳಿಕೆ (social manner) ಯ ಹೆಸರಿನಲ್ಲಿ ಪರಸ್ಪರ ಸ್ರೀಪುರುಷರ ಅತಿಯಾದ ಉದ್ದೇಶರಹಿತ ಒಡನಾಟ ಹೆಚ್ಚಾಗಿರುವ ಇಂದಿನ ಆಧುನಿಕ ಜನಾಂಗಕ್ಕೆ ಅಕ್ಕನವರ ಈ ಜೀವನ ಮೌಲ್ಯ ಮಾದರಿಯಾಗಿದೆ ಎನ್ನಲಡ್ಡಿಯಿಲ್ಲ.

ಒಳಗಣ ಗಂಡನಯ್ಯಾ,
ಹೊರಗಣ ಮಿಂಡನಯ್ಯಾ, ಎರಡನೂ ನಡೆಸಲು ಬಾರದಯ್ಯಾ. ಲೌಕಿಕ ಪಾರಮಾರ್ಥವೆಂಬೆರಡನೂ ನಡೆಸಲು ಬಾರದಯ್ಯಾ. ಚೆನ್ನಮಲ್ಲಿಕಾರ್ಜುನದೇವಯ್ಯಾ, ಬಿಲ್ವ ಬೆಳವಲಕಾಯಿ. ಒಂದಾಗಿ ಹಿಡಿಯಲು ಬಾರದಯ್ಯಾ

ಇಲ್ಲಿ ಗಂಡ ಎಂದರೆ ಗುರುಲಿಂಗಜಂಗಮ ಸಾಕ್ಷಿಯಾಗಿ ಕೈ ಹಿಡಿದ ಪತಿ. ಮಿಂಡ ಎಂದರೆ ಹಲವು ಸ್ತ್ರೀಯರೆಡೆಗೆ ಆಕರ್ಷಿತನಾದ ಪರಪುರುಷ. ಏಕನಿಷ್ಠೆ ಉಳ್ಳ ಪತಿವ್ರತೆಗೆ ತನ್ನ ಪತಿಯ ಹೊರತಾಗಿ ಉಳಿದ ಲೋಕದ ಪುರುಷರನ್ನು ಸ್ಮರಿಸಲು ಆಗದ ಮಾತು. ಅದೇ ರೀತಿ ಪ್ರಾಪಂಚಿಕ ಸುಖಭೋಗ ಮತ್ತು ಆಧ್ಯಾತ್ಮದ ಪರಮಸುಖವನ್ನು ಒಟ್ಟಿಗೆ ಸೇರಿಸಲು ಬರದು. ಎರಡು ಬೇರೆಯ ಆದ ಅನುಭವ. ಬಿಲ್ವದ ಕಾಯಿ ಮತ್ತು ಬೆಳವಲ(ಬೇಲದ) ಕಾಯಿ ನೋಡಲು ಮೇಲ್ನೋಟಕ್ಕೆ ಒಂದೇ ರೀತಿ ಕಂಡರೂ ಎರಡು ಬೇರೆಯೇ ಆದ ರುಚಿ, ಉಪಯೋಗ ಹೊಂದಿವೆ. ಹಾಗೆಂದು ಬಿಲ್ವ ಮತ್ತು ಬೆಳವಲ ಹಣ್ಣನ್ನು ಒಂದೇ ರೀತಿ ಉಪಯೋಗಿಸಲು ಬರುವುದಿಲ್ಲ. ಅದರಂತೆ ದೇವರ ದೇವನಾದ ಚೆನ್ನಮಲ್ಲಿಕಾರ್ಜುನನ ಬಿಟ್ಟು ಉಳಿದ ಯಾರು ನನಗೆ ಸಮರಲ್ಲ ಎಂದು ಅಕ್ಕಮಹಾದೇವಿ ತಾಯಿ ತನ್ನ ದೇವನಿಷ್ಠೆಯನ್ನು ಸಾದರಪಡಿಸಿದ್ದಾರೆ.

ಕಾಮ ಬಲ್ಲಿದನೆಂದಡೆ ಉರುಹಿ ಭಸ್ಮವ ಮಾಡಿದ. ಕಾಲ ಬಲ್ಲಿದನೆಂದಡೆ ಕೆಡಹಿ ತುಳಿದ. ಎಲೆ ಅವ್ವಾ, ನೀನು ಕೇಳಾ ತಾಯೆ ಬ್ರಹ್ಮ ಬಲ್ಲಿದನೆಂದಡೆ ಶಿರವ ಚಿವುಟಿಯಾಡಿದ.
ಎಲೆ ಅವ್ವಾ ನೀನು ಕೇಳಾ ತಾಯೆ
ವಿಷ್ಣು ಬಲ್ಲಿದನೆಂದಡೆ ಆಕಳ ಕಾಯ್ದಿರಿಸಿದ.
ತ್ರಿಪುರದ ಕೋಟೆ ಬಲ್ಲಿತ್ತೆಂದಡೆ
ನೊಸಲಕಂಗಳಲುರುಹಿದನವ್ವಾ.
ಇದು ಕಾರಣ, ಚೆನ್ನಮಲ್ಲಿಕಾರ್ಜುನ
ಗಂಡನೆನಗೆ, ಜನನ ಮರಣಕ್ಕೊಳಗಾಗದ
ಬಲುಹನೇನ ಬಣ್ಣಿಪೆನವ್ವಾ

ಅಕ್ಕನವರು ಈ ವಚನದಲ್ಲಿ ಏಕದೇವ ಉಪಾಸನೆಗೆ ಮೊದಲು ನಂಬಿದ್ದ ಶಿವ ಭಕ್ತಿಯನ್ನು ಇಲ್ಲಿ ಹೇಳಿದ್ದಾರೆ. ತನ್ನ ಪುರುಷನ ಔನ್ನತ್ಯವನ್ನು ಮರೆತು ಪರಪುರುಷನು ಎಷ್ಟೇ ಬಲ್ಲಿದನಿರಲಿ ಆತನ ಆಕರ್ಷಣೆಗೆ ಒಳಗಾಗುವ ಹೆಣ್ಣು ಮಕ್ಕಳ ದೌರ್ಬಲ್ಯ , ಅಜ್ಞಾನವನ್ನು ಇಲ್ಲಿ ಜರಿದಿದ್ದಾರೆ. ಜಗತ್ತನ್ನು ಮರುಳು ಮಾಡಿ ತನ್ನ ಪ್ರಭಾವದಿಂದ ಅತಿರಥ ಮಹಾರಥರನ್ನಲ್ಲದೆ ತಪಸ್ಸಿನಲ್ಲಿ ನಿರತರಾಗಿದ್ದ ಋಷಿಮುನಿಗಳನ್ನು ಬಿಡದೆ ಕಾಡುವ ಕಾಮ

ಅಥವ ಮನ್ಮಥನನ್ನು ಯೋಗಿ ಶಿವ ತನ್ನ ಉರಿನೇತ್ರದಿಂದ ಸುಟ್ಟು ಭಸ್ಮ ಮಾಡಿದ ಕಥೆ ಪುರಾಣ ಪ್ರಸಿದ್ಧ. ಇನ್ನು ಕಾಲ ಅಂದರೆ ಯಮ ಪ್ರಾಣಕ್ಕೆ ಅಧಿಪತಿ, ಪರಾಕ್ರಮಿ ಎಂದು ಭ್ರಮಿಸಿದರೆ ಮೃತ್ಯುಂಜಯನಾಗಿ ಅಕಾಲ ಮೃತ್ಯುವಿಗೆ ಒಳಗಾದ ತನ್ನ ಪರಮ ಭಕ್ತನಾದ ಮಾರ್ಕಂಡಯ್ಯನನ್ನು ಮುಟ್ಟಲು ಅವಕಾಶ ಕೊಡದೆ ರಕ್ಷಿಸಿ ಕೀರ್ತಿವಂತನಾದ. ಜಗತ್ತಿನ ಸೃಷ್ಟಿಕರ್ತ ಎಂದು ತಿಳಿದ ಬ್ರಹ್ಮ ಸುಳ್ಳು ಹೇಳಿದ ಪರಿಣಾಮವಾಗಿ ತನ್ನ ಶಿರವನ್ನೆ ಬಲಿಕೊಡಬೇಕಾಯಿತು. ಸೃಷ್ಟಿಯ ಸ್ಥಿತಿಪಾಲನೆಗೆ ಕಾರಣ ಎಂದು ಹೇಳುವ ವಿಷ್ಣು ತಾನೇ ಕೃಷ್ಣ ಜನ್ಮದಲ್ಲಿ ದನ ಕಾಯುವ ಕೆಲಸ ಮಾಡಬೇಕಾಯಿತು. ತ್ರಿಪುರದ ಕೋಟೆಯ ಭದ್ರತೆಯ ಬಗ್ಗೆ ಯೋಚಿಸಿದರೆ ಅಂಥ ಅಭೇದ್ಯ ಕೋಟೆಯನ್ನು ಶಿವ ಕ್ಷಣಮಾತ್ರದಲ್ಲಿ ಧ್ವಂಸಗೊಳಿಸಿದ. ಈ ಎಲ್ಲ ಮಹಾಸಾಹಸಗಳನ್ನು ಮೆರೆದ ಚೆನ್ನಮಲ್ಲಿಕಾರ್ಜುನನು ಮಾತ್ರ ಗಂಡ ನನಗೆ. ಜನನ ಮರಣವಿಲ್ಲದ, ವರ್ಣನೆಗೆ ನಿಲುಕದ, ಅದ್ವಿತೀಯನೂ, ಸರ್ವಶಕ್ತನೂ ಆದ ಪರಮಾತ್ಮನನ್ನು ಬಣ್ಣಿಸಿದ್ದಾರೆ.

ಇದಿಷ್ಟು ಪತಿವ್ರತಾ ಭಕ್ತಿಗೆ ಸಂಬಂಧಿಸಿದ ಮಾತಾಯಿತು. ಇನ್ನು ಮುಂದೆ ಬಸವಾದಿ ಪ್ರಮಥರು ತಮ್ಮ ವಚನಗಳಲ್ಲಿ ಉಲ್ಲೇಖಗೊಂಡಿರುವ ಹಲವು ಪುರುಷರ ಸಂಗ ಮಾಡುವ ಸ್ತ್ರೀಯ ಅನ್ಯೆತಿಕ ನಡವಳಿಕೆಯನ್ನು ಉದಾಹರಿಸಿ ಧಾರ್ಮಿಕ, ಸಾಮಾಜಿಕ ಮತ್ತು ತಾತ್ವಿಕ ಮೌಲ್ಯವನ್ನು ಎತ್ತಿ ಹಿಡಿದಿರುವ ಶೈಲಿಯನ್ನು ಮನನ ಮಾಡೋಣ.

ನಿಜಗಂಡನ ಸಂಗವನೊಲ್ಲದೆ ಬೊಜಗರ ಸಂಗ ಮಾಡುವ
ತೊತ್ತಿಗೆಲ್ಲಿಯದೊ ನಿಜಮುತ್ತೈದೆತನ?
ತ್ರಿಜಗವಂದಿತ ಲಿಂಗವ ಕರಕಮಲದಲ್ಲಿ
ಹಿಡಿದುಕೊಂಡಿರ್ದ ಬಳಿಕ
ಅಲ್ಲಿ ನಂಬಿ ಪೂಜಿಸಿ ಮುಕ್ತಿಯ
ಪಡೆಯಲರಿಯದೆ
ಲೋಕದ ಗಜಿಬಿಜಿ ದೈವಂಗಳಿಗೆರಗುವ
ಕುನ್ನಿ ಮಾನವರ ಕಂಡರೆ ಯಮನು
ಜಿಗಿದೆಳೆದೊಯ್ದು ಕೊಲ್ಲದಿಪ್ಪನೆ?
ಹಾಗೆ ಸಾಯಲೆಂದಾತ ನಮ್ಮ ಅಂಬಿಗರ ಚೌಡಯ್ಯ

ಅಂಬಿಗರ ಚೌಡಯ್ಯನವರು ಸ್ವಾಸ್ಥ್ಯ ಕುಟುಂಬದ ಸುಖನೆಮ್ಮದಿಗೆ ಕಾರಣವಾದ ಮೌಲ್ಯವರ್ಧಿತ ಗೃಹಸ್ಥ ಜೀವನದ ಕೌಟುಂಬಿಕ, ಸಾಮಾಜಿಕ ನೀತಿಯನ್ನು ಪರೋಕ್ಷವಾಗಿ ಪ್ರತಿಪಾದಿಸುವ ಮೂಲಕ ದೇವನಿಷ್ಠೆಗೆ ಈ ವಚನದಲ್ಲಿ ಹೆಚ್ಚು ಒತ್ತು ಕೊಟ್ಟಿರುವುದನ್ನು ಗಮನಿಸೋಣ. ತಂದೆತಾಯಿ ಬಂಧುಬಳಗದ ನಡುವೆ ಮದುವೆಯಾಗಿ ತನ್ನ ಗಂಡನ ಸ್ನೇಹ ಮಾಡದೆ ವಿಟಪುರುಷರ ಸಂಗ ಮಾಡುವ ದಾಸಿಯು ಹೇಗೆ ಪತಿವ್ರತೆ ಆಗಲು ಸಾಧ್ಯ? ಹಾಗೆಯೇ ನಿಜಲಿಂಗಾಯತನು ಶ್ರೀ ಗುರುವು ಲೋಕರಕ್ಷಕನಾದ ಪರಮಾತ್ಮನ ಸಂಕೇತವಾದ ಇಷ್ಟಲಿಂಗವನ್ನು ದೀಕ್ಷೆಯ ಮೂಲಕ ಅಂಗೈಯಲ್ಲಿ ಪ್ರತಿಷ್ಠಾಪಿಸಿದ ಬಳಿಕ ಅದನ್ನು ಏಕನಿಷ್ಠೆಯಿಂದ ನಂಬಿ ಪೂಜಿಸಿ ಧ್ಯಾನಿಸಿ ಇಷ್ಟಾರ್ಥಸಿದ್ಧಿ ಪಡೆಯಬೇಕು. ಈ ಮಾರ್ಗವನ್ನು ಬಿಟ್ಟು ಅನ್ಯ ದೈವಂಗಳನ್ನು ಪೂಜಿಸುವವರು ಕಾಲನ ಗರ್ಭದಲ್ಲಿ ಸರ್ವನಾಶವಾಗುವರು ಎಂದು ಅಂಬಿಗರ ಚೌಡಯ್ಯನವರು ಅಂಥ ಮೂಢಭಕ್ತರ ಅಂತಿಮ ದಿನಚರಿಯನ್ನು ಬರೆದಿರುವರು.

ಊಡುವ ಉಡಿಸುವ ಗಂಡನಿದ್ದಂತೆ ಜೋಡೆ, ಮಿಂಡಂಗೆ ಕಣ್ಣ ಚೆಲ್ಲುವಳ ಕೇಡಿಂಗೆ ಬೆರಗಾದೆ ನಾನು.
ಲಿಂಗದೇವನು ಸಿಂಗಾರದ ಮೂಗ ಬಣ್ಣಿಸಿ,
ಹಲುದೋರೆ ಕೊಯ್ವ

ಗುರು ಬಸವಣ್ಣನವರು ಈ ವಚನದಲ್ಲಿ ತನ್ನನ್ನು ಪ್ರೀತಿ–ಪ್ರೇಮಗಳಿಂದ ಸುಖವಾಗಿ ನೋಡಿಕೊಳ್ಳುವ ಶ್ರೀಮಂತ ಗಂಡನಿದ್ದರೂ ಮತ್ತೊಬ್ಬನ ಸಹವಾಸ ಮಾಡುವ ಹೆಂಗಸಿನ ಕೆಟ್ಟ ನಡೆತೆಗೆ ಬೆರಗಾಗುತ್ತಿದಾರೆ. ಆಕೆಯ ಅನ್ಯೆತಿಕ ನಡವಳಿಕೆಗೆ ಪ್ರತಿಯಾಗಿ ಪರಮಾತ್ಮನು ಮುಖದ ಅಂದ. ಕೆಡುವಷ್ಟು ಕುರೂಪಿಯಾಗುವ ಕಠಿಣಶಿಕ್ಷೆ ವಿಧಿಸುತ್ತಾನೆ

ಎಂದು ಸಾರುವ ಮೂಲಕ ಇಂಥ ಸಂಬಂಧವನ್ನು ವಿರೋಧಿಸಿದ್ದಾರೆ; ಎಚ್ಚರಿಸಿದ್ದಾರೆ.

ಕಾಮವುಳ್ಳವರಿಗೆ
ಕಾಯಸಂಗ ಮಚ್ಚು ನೋಡಾ.
ಕಾಮವಿಲ್ಲದವರಿಗೆ
ಲಿಂಗಸಂಗ ಮಚ್ಚು ನೋಡಾ.
ಕಾಮವಿಕಾರಿ ಕಾಯದತ್ತ ಮುಂತಾದಡೆ,
ನಾ ನಿಮ್ಮತ್ತ ಮುಂತಾದೆ,
ಚೆನ್ನಮಲ್ಲಿಕಾರ್ಜುನದೇವಯ್ಯಾ,
ಕಾಮವಿಕಾರಿಯ ಸಂಗವ ಹೊದ್ದಿದಡೆ
ನಿಮ್ಮಾಣೆ.

ಅಕ್ಕ ಮಹಾದೇವಿಯವರು ಸ್ತ್ರೀಪುರುಷರ ಪರಸ್ಪರ ಸಂಬಂಧಕ್ಕೆ ಮೂಲ ಕಾರಣವಾದ ಕಾಮನ ಪ್ರಭಾವವನ್ನು ಕುರಿತು ಈ ವಚನದಲ್ಲಿ ವಿವರಿಸಿದ್ದಾರೆ. ಕಾಮಕ್ಕೆ ವಶವಾದವರು ಹೆಣ್ಣು ಅಥವ ಗಂಡಿನ ದೇಹಾಕರ್ಷಣೆಗೆ ಮಾರು ಹೋಗಿ ಕೇವಲ ಶರೀರವನ್ನು ಮಾತ್ರ ಪ್ರೀತಿಸುತ್ತಾರೆ. ಆದ ಕಾರಣ ಕಾಯಸಂಗದಲ್ಲೆ ತೃಪ್ತಿ ಕಾಣುತ್ತಾರೆ.


ಇಲ್ಲಿ ನಿಜವಾದ ಪ್ರೀತಿ ಇರುವುದಿಲ್ಲ ಎಂಬ ಸತ್ಯವನ್ನು ಪ್ರತಿಪಾದಿಸುವ ಮೂಲಕ ಇಂದಿನ ಯೌವನಮದದಲ್ಲಿರುವ ಹದಿಹರೆಯದ ತರುಣಿಯರಿಗೆ ಮಾರ್ಗ ದರ್ಶನ ಮಾಡುತ್ತಿದ್ದಾರೆ. ಕಾಮನಿಂದ ದೂರವಾದವರು ಮಾತ್ರ ನಿರಾಕಾರ, ನಿರಂಜನನಾದ ದೇವರಸಂಗಕ್ಕೆ, ಲಿಂಗಾಂಗ ಸಾಮರಸ್ಯಕ್ಕೆ, ಹಂಬಲಿಸುತ್ತಾರೆ. ಪರಮಾತ್ಮನು ಭಕ್ತನ ಮನಸ್ಸು-ಆತ್ಮಗಳನ್ನು ಆವರಿಸಿ ಆನಂದವನ್ನು ನೀಡುತ್ತಾನೆ. ಕಾಮವಿಕಾರಿಯು ದೇಹಸುಖವನ್ನು ಮಾತ್ರ ಅನುಭವಿಸಲು ಹಾತೊರೆದಂತೆ ನಾನು ನಿಮ್ಮ ಬಳಿ ಸಾರಿ ಲಿಂಗಾನಂದವನ್ನು ಸವಿಯಲು ಧಾವಿಸುವೆನೆ ಹೊರತು ಕೇವಲ ಉಂಡು ಬೀಸಿ ಒಗೆದ ಬಾಳೆಎಲೆಯಂತೆ ಕಾಯಸಂಗ ಮಾಡುವ ಕಾಮವಿಕಾರಿಗಳ ಸಂಗವನ್ನು ಮಾಡಲಾರೆ ಎಂಬ ದೃಢಸಂಕಲ್ಪವನ್ನು ತಾಳಿದ್ದಾರೆ, ತನ್ಮೂಲಕ ನಮ್ಮನ್ನೂ ಎಚ್ಚರಿಸುತ್ತಿದ್ದಾರೆ.

ಆಚಾರ | ಅರಿವು | ಅನುಭಾವ

ಲಿಂಗಾಂಗ ಯೋಗ ಸಾಧನೆ -2



❋ ಪೂಜ್ಯಶ್ರೀ ಬಸವಪ್ರಭು ಸ್ವಾಮೀಜಿ.



ಅದ್ಭುತದಾಕಾಶದಲ್ಲಿ ಶುಭ್ರವರ್ಣದ ಅಂಗನೆ
ವಿದ್ಯುಲ್ಲತೆಯ ಹಡೆದಳು ನೋಡಾ!
ವಿದ್ಯುಲ್ಲತೆಯ ಬೆಳಗಿನಿಂದ ಶುದ್ಧ ಪ್ರಸಾದವ
ಕಂಡು ಶದ್ಧಾಶುದ್ಧವನಳಿದು ನಾ ನೀನೆಂಬುದ
ಹೊದ್ದದೆ ಎರಡಳಿದ ನಿರಾಳ ನೀನೆ,
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ.
(ಸವಸ)

ಈ ಮೇಲೆ ಸೂಚಿಸಿದ 'ಹೆಲಿಯೊ ಪಾಸ್' ವಲಯವೆಂದರೆ ಅದ್ಭುತದಾಕಾಶ. ಅಲ್ಲಿಯ ವಿದ್ಯುತ್ ಕಾಂತಿಯ ಕಣಗಳಿಗೆ ಶುಭ್ರವರ್ಣದ ಅಂಗನೆ ಎಂದು ಕರೆದಿದ್ದಾರೆ. ಅಲ್ಲಿಂದ ಶಕ್ತಿಕಣಗಳು ಭೂಮಿಯತ್ತ ಬರುವುದಕ್ಕೆ ವಿದ್ಯುಲ್ಲತೆಯ ಹಡೆದಳು ನೋಡಾ ಎಂದು ಸೂಚಿಸಿದ್ದಾರೆ. ವಿದ್ಯುಲ್ಲತೆಯ ಬೆಳಕಿನಿಂದ ಶುದ್ಧ ಪ್ರಸಾದವ ಕಂಡು, (ಇಲ್ಲಿ ಬೆಳಕು ಎನ್ನುವ ಪರಮಾತ್ಮ ಸ್ವರೂಪ ಹೇಗಿದೆ ಎಂದರೆ ಜ್ಯೋತಿಸ್ವರೂಪವೆಂದು ಹೇಳುತ್ತಾರೆ) ಈ ಬೆಳಕನ್ನು ಲಿಂಗದ ಮುಖಾಂತರ ನಮ್ಮ ಕಣ್ಣಿನಿಂದ ಶರೀರದ ಒಳಗೆ ತೆಗೆದುಕೊಂಡಾಗ ಅದುವೇ ಶುದ್ಧ ಪ್ರಸಾದ. ಆ ಲಿಂಗದಲ್ಲಿ ಗುರು ಲಿಂಗ ಜಂಗಮವಿದ್ದಾರೆ. ಆ ಗುರು, ಲಿಂಗ, ಜಂಗಮದಿಂದಲೇ ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದ ಗಳೆಂದಾಗುತ್ತವೆ. ಇವು ಮೂರು ಒಂದೇ ಆಗಿವೆ. ಅಂತಿಮವಾಗಿ ಈ ಪ್ರಸಾದ ಪಡೆಯಲು ನಾನು ಸನ್ನದ್ಧನಾಗಿದ್ದೇನೆ; ದೇವನೆ ಕೃಪೆ ಮಾಡು ಎಂಬ ಭಾವ ನಮ್ಮದಾಗಬೇಕು.

ಎನ್ನ ವಾಮ ಕ್ಷೇಮ ನಿಮ್ಮದಯ್ಯಾ
ಎನ್ನ ಹಾನಿ-ವೃದ್ಧಿ ನಿಮ್ಮದಯ್ಯಾ
ಎನ್ನ ಮಾನಾಪಮಾನ ನಿಮ್ಮದಯ್ಯಾ
ಬಳ್ಳಿಗೆ ಕಾಯಿ ದಿಮ್ಮಿತ್ತೆ ಅಯ್ಯಾ ಲಿಂಗದೇವಾ.

'ಸಾಧನೆಗೆ ಕುಳಿತ ನಮ್ಮಲ್ಲಿ ಎನ್ನ ಸುಖ-ದುಃಖ, ನೋವು ನಲಿವು, ಲಾಭ-ನಷ್ಟ, ಮಾನ-ಅಪಮಾನವನ್ನೆಲ್ಲ ದೇವನಿಗೆ ಮೀಸಲು. 'ಅವನು ಆಡಿಪ ಬೊಂಬೆಗಳು ನಾವು' ಎಂದು ನಮ್ಮ ಕಾಯವನ್ನು ಅವನಿಗೆ ಅರ್ಪಿಸಬೇಕು. ಆಗ ದೇವನಿಂದ ಖಂಡಿತ ರಕ್ಷಣೆ ದೊರೆಯುತ್ತದೆ. ದೇವನೇ ನನ್ನ ಸುಖ-ದುಃಖಗಳಿಗೆ ನೀನು ಕಾರಣನಾ ಅಥವಾ ನಾನೆ ಕಾರಣನಾ ಈ ಸುಖ-ದುಃಖದ ಆಚೆಯ ಜೀವನ ನೋಡಬೇಕಲ್ಲ. ಆ ಜೀವನ ಸಮೃದ್ಧಗೊಳಿಸಬೇಕಲ್ಲ ಅದಕ್ಕಾಗಿ ದೇವನೆ, ನಾನು-ನೀನು ನೀನೆ-ನಾನು ಆಗುವ ಮಹಾಭಾಗ್ಯವನ್ನು ನಾನು ಕರುಣಿಸಿಕೊಂಡು ಈ ಸಾಧನೆಯಲ್ಲಿ ಕುಳಿತ್ತಿದ್ದೇನೆ.

ಜಗವನ್ನೊಳಗೊಂಡ ಲಿಂಗವು
ಸೊಗಯಿಸಿರ್ದೆನ್ನ ಕರಸ್ಥಲಕ್ಕೆ ಬಂದಿರಲು
ಕಂಡು ಹಗರಣವಾಯಿತ್ತೆನಗೆ
ಗುರು, ಲಿಂಗ, ಜಂಗಮ ಸ್ವರೂಪಗೊಂಡು
ಮೂರ್ತಿಗೊಂಡಿತ್ತು ನೋಡಾ
ಆಹಾ! ಎನ್ನ ಭಾಗ್ಯವೆ, ಆಹಾ! ಎನ್ನ ಪುಣ್ಯವೆ,
ಆಹಾ! ಅಖಂಡೇಶ್ವರಾ ನಿಮ್ಮ ಘನವ ಕಂಡು
ಎನ್ನ ಮನಕ್ಕೆ ಮಂಗಳವಾಯಿತ್ತಯ್ಯಾ. (ಸವಸ)

ಎನ್ನುವ ಹಾಗೆ, ಎಷ್ಟೋ ಜನ್ಮದ ಪುಣ್ಯದ ಫಲದಿಂದ ನಾನು ಬುದ್ಧಿಶಕ್ತಿ, ವಿಚಾರಶಕ್ತಿ, ಮಾತಿನ ಶಕ್ತಿಯನ್ನುಳ್ಳ ಮಾನವ ಪ್ರಾಣಿಯಾಗಿದ್ದಾನೆ. ಈ ಮೂರು ಶಕ್ತಿಯನ್ನು ಬಳಸಿಕೊಂಡು ಮಾನವತ್ವದಿಂದ ದೈವತ್ವದ ಕಡೆಗೆ ಸಾಗಲು ಸಾಧನೆಗೆ ಕುಳಿತ್ತಿದ್ದೇನೆ. ಈಗ ನನ್ನಲ್ಲಿ ಆರೋಗ್ಯ ಉತ್ತಮವಾಗಿದೆ. ನನ್ನ ಬದುಕು ನನ್ನ ಕೈಯಲ್ಲಿದೆ, ನನ್ನ ಬದುಕನ್ನು ಹೇಗೆ ಬೇಕೊ ಹಾಗೆ ಕಟ್ಟಿಕೊಳ್ಳಬೇಕು ಅದಕ್ಕಾಗಿ ಈ ಬದುಕಿಗೆ ಮಾರ್ಗದರ್ಶನ ನೀಡುವ ಗುರುವಾಗಿ ನೀನು ನನ್ನ ಕೈಯಲ್ಲಿದ್ದಿಯಾ ಎಂಬುದನ್ನು ಷಣ್ಮುಖ ಶಿವಯೋಗಿಗಳು ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ.

ಎನ್ನ ಕರಸ್ಥಲದ ಮಧ್ಯದಲ್ಲಿ ಪರಮ
ನಿರಂಜನನ ಕುರುಹು ತೋರಿದ ಆ ಕುರುಹಿನ
ಮಧ್ಯದಲ್ಲಿ ಅರುಹಿನ ಕಳೆಯ ತೋರಿದ ಆ
ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ
ತೋರಿದ ಆ ಬೆಳಗಿನ ನಿಲುವಿನೊಳಗೆ ಎನ್ನ
ತೋರಿದ ಎನ್ನೊಳಗೆ ತನ್ನ
ತೋರಿದ ತನ್ನೊಳಗೆ ಎನ್ನನಿಂಬಿಟ್ಟುಕೊಂಡ
ಮಹಾಗುರುವಿಗೆ ನಮೋ ನಮೋ
ಎನ್ನುತಿರ್ದೆನಯ್ಯಾ ಅಖಂಡೇಶ್ವರಾ.

ಅದಕ್ಕಾಗಿ ನಾನು, ನಿನ್ನನ್ನು ಸದಾ ಮಾರ್ಗದರ್ಶಿಯಾಗಿ ಮಾಡಿಕೊಂಡು ಅರಿವಿನ ಗುರುವಾಗಿ ಮಾಡಿಕೊಂಡು ಪೂಜಿಸುತ್ತಿದ್ದೇನೆ, ಧ್ಯಾನಿಸುತ್ತಿದ್ದೇನೆ, ಹೇ ತಂದೆ ಅನುಗ್ರಹಿಸು. "ನಿನ್ನಲ್ಲದೆ ಯಾರನು ಬೇಡೆನು. ಬನ್ನವ ಕಳೆಯುವ ಚಿನ್ಮಯನೆ, ಎನ್ನಯ ಜೀವನ ಸರ್ವಸಂಪದದಿ ಬೆಳಗಲು ಕರುಣಿಸು ಸಚ್ಚಿದಾನಂದ" ಎಂದು ಮನದಲ್ಲಿ ಉತ್ಕಟ ಭಕ್ತಿಯನ್ನು ಮೈಗೂಡಿಸಿಕೊಳ್ಳಬೇಕು. ಇಷ್ಟಕ್ಕೆ ನಿಲ್ಲದೆ, ಈ ಲಿಂಗಾಂಗಯೋಗದಲ್ಲಿ ನವಚಕ್ರಗಳನ್ನು ಜಾಗೃತಿಗೊಳಿಸಿಕೊಳ್ಳವುದು ಬಹುಮುಖ್ಯವಾಗಿದೆ. ಆ ದೇವನನ್ನು ಬೆರೆಯಲು ಮತ್ತು ಪಶ್ಚಿಮ ಚಕ್ರದಿಂದ ಸುರಿಯುವ ಅಮೃತವನ್ನು ಪಡೆಯುವುದೇ ಲಿಂಗಾಂಗ ಯೋಗಿಯ ಅಂತಿಮ ಗುರಿಯಾಗಿದೆ. ಈಗ ತ್ರಾಟಕಯೋಗದಲ್ಲಿ ಕುಳಿತ ಸಾಧಕನು ಒಂದೊಂದಾಗಿ ಈ ಚಕ್ರದ ಕಡೆಗೆ ಗಮನವನ್ನು ಕೊಡುತ್ತಾ ಹೋಗಬೇಕು.

***** ಓದುಗರಿಗೆ ವಿಶೇಷ ಸೂಚನೆ *****

ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿ ದ್ದಲ್ಲಿ ವಿಶೇಷ ಲೇಖನಗಳನ್ನು ಡಿಟಿಪಿ ಮಾಡಿ basavakumaraswamiji@gmail.com ಮೇಲ್ ಅಡ್ರೆಸ್‌ಗೆ ಲೇಖನಗಳನ್ನು ಕಳಿಸಬಹುದು.

ನಿಮ್ಮ ಕುಟುಂಬದಿಂದಲೂ ಶರಣರ ಹಬ್ಬಗಳಿಗೆ ಶುಭಾಶಯ ಕೋರಬಹುದು. ಕುಟುಂಬದ ಅಥವಾ ಒಬ್ಬರ ಫೋಟೋ ಕಳುಹಿಸದರೆ ನಿಮ್ಮ ಫೋಟೊವನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಶ್ರೀ ಬಸವ ಕುಮಾರ ಸ್ವಾಮೀಜಿ
ಮೊ.9449588669.

ನವ ಚಕ್ರಗಳಲ್ಲಿ ಆರು ಚಕ್ರಗಳು(ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರ, ಅನಾಹತ, ವಿಶುದ್ಧಿ, ಆಜ್ಞಾ) ಉಂಗುರದಂತೆ ನಮ್ಮ ದೇಹದಲ್ಲಿ ಸುತ್ತುತ್ತಿವೆ. ನೆತ್ತಿಯ ಮೇಲೆ ಸಹಸ್ರ ಚಕ್ರ ಇದೆ ಈ ಚಕ್ರ ದಾಟಿದ ಮೇಲೆ ತಲೆಯ ಹಿಂಬಾಗ ಶಿಖಾ ಮತ್ತು ಪಶ್ಚಿಮ ಚಕ್ರದಲ್ಲಿ ದೇವನ ದಿಗ್ದರ್ಶನ ಮಾಡಿಕೊಳ್ಳಲು ಬರುತ್ತದೆ. ಚಕ್ರಗಳು ದೇಹದಲ್ಲಿ ಚೈತನ್ಯ ವಾಹಕಗಳಾಗಿ ಪ್ರಕೃತ್ತಿಯಲ್ಲಿನ ತರಂಗ ಶಕ್ತಿ ಭಾವನೆಗಳನ್ನು ಸಂಗ್ರಹಿಸಿ, ನಮ್ಮ ದೇಹದ ನಾಡಿ, ದಮನಿ, ಶಿರಸ್ಸಿಗೆ ತಲುಪಿಸುತ್ತವೆ. ಇದರಿಂದ ಸಾಧನೆಯಲ್ಲಿ ಕುಳಿತ ಸಾಧಕನಿಗೆ ದೇಹದ ಬೆನ್ನು ಹುರಿಯ ಕೆಳಭಾಗದಿಂದ ಶೀರೊಭಾಗದವರೆಗೆ ಶಕ್ತಿ ಅಂತರ್ಗತವಾಗುತ್ತದೆ. ಬೆನ್ನು ಹುರಿಯಲ್ಲಿ ಈಡಾ, ಪಿಂಗಳ ಹಾಗೂ ಸುಷಮ್ನ ನಾಡಿಗಳು ಎಂಬ ಮೂರು ನಾಡಿಗಳು ಇದ್ದು ಅವು ಕೆಲಸ ಮಾಡಲು ಪ್ರಾರಂಭಿಸುತ್ತವೆ. ಇದೇ ಬೆನ್ನು ಹುರಿಯಲ್ಲಿರುವ ಏಳು ಶಕ್ತಿ ಕೇಂದ್ರಗಳನ್ನು ಚಕ್ರಗಳೆಂದು ನಾವು ಭಾವಿಸಿಕೊಳ್ಳಬೇಕು. ಇಲ್ಲಿ ಚಕ್ರದ ನಾಡಿಗಳು ಪ್ರಮುಖ ಶಕ್ತಿ ವಾಹಿನಿಗಳಾಗಿ ಕೆಲಸ ಮಾಡುತ್ತವೆ. ಚಕ್ರ ನಮ್ಮೊಳಗೆ ಸದಾ ತಿರುಗುತ್ತಲೇ ಇದ್ದು ಇದರಿಂದ ಶಕ್ತಿ ಸಂಚಾರ ಮಾಡುತ್ತಿದೆ. ಈ ಚಕ್ರಗಳು ನಮ್ಮ ದೇಹದ ಅಂಗಗಳಿಗೆ ಗ್ರಂಥಿಗಳಿಗೆ ಜೋಡಣೆಯಾಗಿವೆ. ಈ ಶರೀರದ ಸಮಗ್ರ ವ್ಯವಸ್ಥೆಯನ್ನು ಈ ಚಕ್ರಗಳು ನೋಡಿಕೊಳ್ಳುತ್ತಿವೆ ಮತ್ತು ದೈಹಿಕ, ಬೌದ್ಧಿಕ ಭಾವಾನಾತ್ಮಕ ಮತ್ತು ಆಧ್ಯಾತ್ಮಿಕ ಕ್ರಿಯೆಗಳೊಂದಿಗೆ ಸಹಯೋಗ ಹೊಂದಿ ದೈಹಿಕ ಸಶಕ್ತತೆಯೊಂದಿಗೆ ಸಮಯ ಪ್ರಜ್ಞೆಯನ್ನುಂಟು ಮಾಡುತ್ತವೆ.

ಈ ದೇಹದ ಹಲವು ಭಾಗಗಳಲ್ಲಿ ಒಂಭತ್ತು ಚಕ್ರಗಳಿದ್ದು ಇವುಗಳಿಗೆ ನವಲಿಂಗಗಳೆಂದು ಹೆಸರಿಸಿದ್ದಾರೆ. ಅದರಲ್ಲಿ ಆರು ಚಕ್ರಗಳು ಆ ಭಾಗದ ಚಕ್ರ ಆ ಭಾಗಕ್ಕೆ ಸಂಬಂಧಪಟಟದ್ದಾಗಿರುತ್ತದೆ. ಇನ್ನು ಮೂರು ಚಕ್ರಗಳು ಸಮಗ್ರ ದೇಹದ ಭಾವವನ್ನು ಅಳಿಸಿ; ದೇವ ಭಾವ, ಲಿಂಗಭಾವವನ್ನು ಹುಟ್ಟಿಸುತ್ತವೆ. ಆಗ ಸಾಧಕ ತಾನೆ ತಾನಾಗುತ್ತಾನೆ. ಈಗ ಒಂದೊಂದೇ ಚಕ್ರ(ಶಕ್ತಿ) ಜಾಗೃತಿಗಾಗಿ ಮತ್ತು ಅದರ ದಳಗಳ ಸಂಕೇತವಾಗಿ, ಆಯಾ ದಳಗಳ ಬೀಜಾಕ್ಷರ ಮಂತ್ರವನ್ನು ಪಠಿಸಬೇಕು.

1.ಮೂಲಾಧಾರ: ಮೊದಲನೇ ನಮ್ಮ ದೇಹದ ಚಕ್ರ ಮೂಲಾಧಾರ. ಇದು ನಾಲ್ಕು ದಳದಿಂದ ಕೂಡಿ ಆಸನ ದ್ವಾರದ ಮೇಲ್ಗಡೆ ಇದೆ. ಬೆನ್ನು ಮೂಳೆಯ ತಳಭಾಗದಲ್ಲಿ ಅಂದರೆ ಮಲದ್ವಾರದ ಹಾಗೂ ಜನನೇಂದ್ರಿಯಗಳ ಮಧ್ಯೆ ಇದೆ. ಇದರ ಬಣ್ಣ ಕೆಂಪಾಗಿದ್ದು, ಬಿಜಾಕ್ಷರ 'ಲಿಂ' ಕಾರದಿಂದ ಕೂಡಿದ್ದಾಗಿದೆ. ಇದು ನಿರ್ನಾಳ ಗ್ರಂಥಿಯಿಂದ ಅನುಸಂಧಾನವಾಗಿದೆ ಮತ್ತು ಪಂಚಭೂತಗಳಲ್ಲೊಂದಾದ ಭೂಮಿಗೆ ಸಂಬಂಧಿಸಿದ್ದಾಗಿದೆ. ಈ ಚಕ್ರ ಜಾಗೃತಿಯಿಂದ ಸಾಧಕನಲ್ಲಿ ರಕ್ಷಣೆ, ಸ್ಥಿರತೆ, ನಿಶ್ಚಲತೆ, ಗುರುತ್ವ, ಸಹನಶೀಲತೆ ಹೆಚ್ಚುತ್ತದೆ. ಮಲಬದ್ಧತೆ, ಸಂಧಿವಾತ, ಸೊಂಟನೋವು, ಕಿಡ್ನಿಯ ರೋಗ, ದೇಹ ಭಾರವಾಗಿರುವುದು; ಈ ಎಲ್ಲಾ ರೋಗಗಳಿಂದ ಮುಕ್ತಿ ಹೊಂದಬಹುದು. ಇಲ್ಲಿ ಮುಖ್ಯವಾಗಿ ಧಾರಣ ಮತ್ತು ಸಮಾನ ಶಕ್ತಿ ಪ್ರಾಪ್ತಿಯಾಗುತ್ತದೆ. ಜಗನ್ಮಾತೆ ಅಕ್ಕಮಹಾದೇವಿಯವರು ತಮ್ಮ ಯೋಗಾಂಗ ತ್ರಿವಿಧಿಯಲ್ಲಿ ಈ ರೀತಿ ಹೇಳಿದ್ದಾರೆ.

ಆಧಾರದೊಳಗಣ ಆದಿಯ ಲಿಂಗಕ್ಕೆ
ಮೇದಿನಿ ಘ್ರಾಣ ಮುಖಮಾಡಿ ||
ಗಂಧದ ಮೋದವ ಕೊಡುವ ನಿಜಭಕ್ತ

ಅಂದರೆ ಮೂಲಾಧಾರಕ್ಕೆ ಆಚಾರ ಲಿಂಗ ಅಳವಟ್ಟು, ಪಂಚೆಂದ್ರಿಯಂಗಳಲ್ಲೊಂದಾದ ಮೂಗಿನ ವಿಷಯವಾಸನೆಯು(ಗಂಧ) ಅಳಿಯುತ್ತದೆ ಆಗ ಅವನೇ ನಿಜಭಕ್ತನಾಗುತ್ತಾನೆ. ಆದ್ದರಿದ ಈ ಚಕ್ರ ಜಾಗೃತಿಗಾಗಿ ಸಾಧಕನು ನಾಲ್ಕು ಬಾರಿ 'ಲಿಂ' ಬೀಜಾಕ್ಷರ ಮಂತ್ರ ಪಠಿಸಬೇಕು.

2.ಸ್ವಾಧಿಷ್ಟಾನ: ಇನ್ನು ಎರಡನೆಯ ಚಕ್ರದ ಸ್ವಾದಿಷ್ಟಾನ ಕಡೆಗೆ ಶಕ್ತಿಯನ್ನು ಉರ್ಧ್ವಮುಖಿಗೊಳಿಸಬೇಕು. ಈ ಚಕ್ರ ನಮ್ಮ ಬೆನ್ನು ಮೂಳೆಯ ಕೆಳಭಾಗದಲ್ಲಿದೆ.

ಇದರ ಬೀಜಾಕ್ಷರ 'ಗಾಂ' ಇದು ನಮ್ಮ ಹೊಕ್ಕಳಿನ ಒಂದು ಇಂಚು ಕೆಳಗೆ ಇದೆ. ಆರು ದಳಗಳ ಕಮಲದಿಂದ ಕೂಡಿದ್ದು, ಈ ಚಕ್ರ ಕಿತ್ತಳೆ ಬಣ್ಣದ್ದಾಗಿದೆ. ಇದು ಮುಖ್ಯವಾಗಿ ಅಂಡಾಶಗಳ ಉತ್ಪಾದನೆಗೆ ಸಂಬಧಿಸಿದ್ದಾಗಿದೆ. ಜಲತತ್ವವನ್ನು ಹೊಂದಿರುವದರಿಂದ ಈ ಚಕ್ರದ ಶಕ್ತಿ ಜಾಗೃತಿಯಿಂದ ಸಾಧಕನಲ್ಲಿ ಸಂಯಮತೆ ಮತ್ತು ಬ್ರಹ್ಮಚರ್ಯ ಪಾಲನೆಯಾಗಿ ಅಪಾರವಾದ ಭಕ್ತಿಭಾವನೆಯ ಅರಿವು ಆಧ್ಯಾತ್ಮದ ಸಂತೋಷದಿಂದ ಪ್ರಾಪ್ತಿಯಾಗುತ್ತದೆ. ಈ ಚಕ್ರ ಜಾಗೃತಿಯಿಂದ ನಪುಂಸಕತೆಯಾಗಲಿ, ಗರ್ಭಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ಬರುವುದಿಲ್ಲ, ಮೂತ್ರಪಿಂಡ ಸಮಸ್ಯೆಗಳು ಹಾಗೂ ಬೆನ್ನು ನೋವು ಸಮಸ್ಯೆ ಉದ್ಭವಿಸುವುದಿಲ್ಲ. ಜಗನ್ಮಾತೆ ಅಕ್ಕಮಹಾದೇವಿಯವರು ಹೇಳುವಂತೆ,

ಆರೆಸಳ ಕಮಲದಲಿ ತೊರುವ ಲಿಂಗಕ್ಕೆ
ಸಾರಜಿಹ್ವೆಗಳ ಮುಖಮಾಡಿ ॥
ರಸಗಳ ಪೂರೈಸಿ ಕೊಡುವ ನಿಜ ನಿಷ್ಟೆ

ಪಂಚೇಂದ್ರೀಯಗಳಲ್ಲೊಂದಾದ ನಾಲಿಗೆಯ ವಿಷಯವಾಸನೆಯ ರುಚಿ, ಗುಣಗಳನ್ನು ಕಳೆದುಕೊಂಡು ಲಿಂಗಮುಖದಿಂದ ಒದಗುವ ರುಚಿಯನ್ನು ಸವೆದು, ನಿಜ ನಿಷ್ಟೆಯನ್ನು ಸಾಧಕನು ಪಡೆಯಬೇಕು. ಈ ಚಕ್ರ ಜಾಗೃತಿಗಾಗಿ ಆರುಬಾರಿ 'ಗಾಂ' ಬೀಜಾಕ್ಷರ ಮಂತ್ರ ಪಠಿಸಬೇಕು.

3.ಮಣಿಪೂರ: ಈಗ ಸ್ವಾದಿಷ್ಟಾನ ಚಕ್ರದಿಂದ ಶಕ್ತಿಯನ್ನು ಮಣಿಪೂರದ ಕಡೆ ಎತ್ತಬೇಕು. ಈ ಮಣಿಪೂರ ಮೂರನೆ ಚಕ್ರ ಇದು ನಮ್ಮ 'ನಾಭಿ' ಕೇಂದ್ರದ ಬಳಿ ಇದೆ. ಈ ಚಕ್ರವು ಅಗ್ನಿ ತತ್ವವನ್ನು ಹೊಂದಿದ್ದು, ನಮ್ಮ ಹೊಕ್ಕಳ ಮತ್ತು ಪಕ್ಕೆಲಬುಗಳ ಮದ್ಯೆ ಇದೆ. ಇದರ ಬಿಜಾಕ್ಷರ 'ಯಂ' ಆಗಿದ್ದು, ಹತ್ತು ದಳದ ಕಮಲ ಇದಾಗಿದೆ. ಇದರ ಬಣ್ಣ ಹಳದಿ. ಬೆಂಕಿ ಇದರ ಮೂಲವಸ್ತು; ಈ ಚಕ್ರ ಜಾಗೃತಿಯಿಂದ ಶುದ್ಧತೆ, ಸಾತ್ವಿಕತೆ, ತೇಜಸ್ಸು, ವರ್ಚಸ್ಸು ಹೆಚ್ಚುತ್ತದೆ. ಜೀರ್ಣಶಕ್ತಿ, ಜಠರಾಗ್ನಿ, ಪಚನಶಕ್ತಿ ವೃದ್ಧಿಸುತ್ತದೆ. ಇದರಿಂದ ಮಧುಮೇಹ, ಅಲ್ಸರ, ವಾತಸಂಬಂಧಿಯಂತಹ ಕಾಯಿಲೆಗಳು ದೂರವಾಗುತ್ತವೆ. ಇದು ಮೇದೊಜೀರಕ ಪಾಂಕ್ರಿಯನ್ ಗ್ರಂಥಿಯೊಂದಿಗೆ ಸಹಯೋಗ ಹೊಂದಿದೆ. ಜಗನ್ಮಾತೆ ಅಕ್ಕಮಹಾದೇವಿಯವರು ಹೇಳುವಂತೆ,

ಹತ್ತೆಸಳ ಕಮಲದಲ್ಲಿ ಗೊತ್ತಿನ ಲಿಂಗಕ್ಕೆ
ಮತ್ತೆ ನೇತ್ರಗಳ ಮುಖಮಾಡಿ॥
ರೂಪಿನ ತುತ್ತುಗಳ ಕೊಡುವ ಅವದಾನಿ.

ಪಂಚೇಂದ್ರಿಯಂಗಳಲ್ಲೊಂದಾದ ಕಣ್ಣಿನ ಕೆಟ್ಟ ದೃಷ್ಟಿಯ ವಿಷಯವಾಸನೆ ಕಳೆದುಕೊಂಡು ಕಣ್ಣುಗಳನ್ನು ಶಿವಲಿಂಗ ಮಾಡಿಕೊಳ್ಳಬೇಕು; ಅಂದರೆ ನೋಡಿದ್ದೆಲ್ಲಾ ಶಿವ ಸ್ವರೂಪವೆಂದು ತಿಳಿಯಬೇಕು. ಆಗ ಸಾಧಕನು ತಾನೇ ಅವಧಾನಿಯಾಗುತ್ತಾನೆ. ಜಗತ್ತೆಲ್ಲಾ ಅವನಿಗೆ ಶಿವಮಯವಾಗಿ ಕಾಣುತ್ತದೆ. ಈ ಚಕ್ರ ಜಾಗೃತಿಗಾಗಿ ಹತ್ತು ಬಾರಿ 'ಯಂ' ಬೀಜಾಕ್ಷರ ಮಂತ್ರ ಪಠಿಸಬೇಕು.

*** ಓದುಗರಿಗೆ ವಿಶೇಷ ಸೂಚನೆ ***

ಶರಣ ಬಂಧುಗಳೆ ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದಲ್ಲಿ ವಿಶೇಷ ಲೇಖನಗಳನ್ನು **basavakumaraswamiji@gmail.com** ಮೇಲ್ ಅಡ್ರೆಸ್‌ಗೆ ಲೇಖನಗಳನ್ನು ಕಳಿಸಬಹುದು.

ನಿಮ್ಮ ಕುಟುಂಬದಿಂದಲೂ ಶರಣರ ಹಬ್ಬಗಳಿಗೆ ಶುಭಾಶಯ ಕೋರಬಹುದು. ಕುಟುಂಬದ ಅಥವಾ ಒಬ್ಬರ ಫೋಟೋ ಕಳುಹಿಸಿದರೆ ನಿಮ್ಮ ಫೋಟೊವನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ಶ್ರೀ ಬಸವಕುಮಾರ ಸ್ವಾಮೀಜಿ
ಮೊ.9449588669.

4.ಅನಾಹತ: ಹೀಗೆ ಸಾಧಕನಲ್ಲಿ ಮಣಿಪೂರ ಚಕ್ರ ಜಾಗ್ರಾ ಆಗ್ತಾ ಈಗ ಅನಾಹತ ಚಕ್ರಕ್ಕೆ ಅಂದರೆ ಹೃದಯ ಚಕ್ರಕ್ಕೆ ಶಕ್ತಿ ಊರ್ದ್ವಮುಖವಾಗಬೇಕು. ಈ ಚಕ್ರ ಹೃದಯದ ಸಮೀಪದಲ್ಲಿದ್ದು, ಇದರ ಬಣ್ಣ ಹಸಿರಾಗಿದೆ. ಇದರ ಬೀಜಾಕ್ಷರ 'ನಂ'ಕಾರದಿಂದ ಕೂಡಿದ್ದಾಗಿದೆ. ಹನ್ನೆರಡು ದಳದ ಕಮಲ ಇದಾಗಿದ್ದು, ಇದರ ವಿನ್ಯಾಸ 'ತೈಮಸ್ ಗ್ರಂಥಿ'ಯೊಂದಿಗೆ ಸಂಬಂಧ ಹೊಂದಿದೆ. ಈ ಚಕ್ರ ಸಾಧನೆಯಿಂದ ನಮ್ಮಲ್ಲಿ ಪ್ರೇಮ, ಶಾಂತಿ, ಶುದ್ಧ ಸೌಂದರ್ಯ, ಶುದ್ಧ ಸತ್ಯ, ನೈರ್ಮಲ್ಯ, ಯೋಗಕ್ಷೇಮ ಹಾಗೂ ಮಿತ್ರಗುಣಗಳು ಅಳವಡುತ್ತವೆ. ಈ ಚಕ್ರ ಜಾಗೃತಿಯಿಂದ ಹೃದಯರೋಗ, ಚರ್ಮಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಕಾಣಿಸಿಕೊಳ್ಳುವುದಿಲ್ಲ. ಜಗನ್ಮಾತೆ ಅಕ್ಕಮಹಾದೇವಿಯವರು ಹೇಳುವಂತೆ,

ದ್ವಾದಶದಳ ಕಮಲದ ಮೋದದ ಜಂಗಮಕೆ
ಸಾದರದ ತ್ವಕ್ಕ ಮುಖಮಾಡಿ ॥
ಸ್ವರುಷದ ಸ್ವಾದವ ಕೊಡುವ ಅನುಭಾವಿ.

ಈ ಚಕ್ರ ಜಾಗೃತಿಯಿಂದ ಪಂಚೇಂದ್ರಿಯಂಗಳಲ್ಲೊಂದಾದ ಚರ್ಮದ ವಿಷಯ ವಾಸನೆಯ ತೊಲಗಿ, ಸ್ಪರ್ಶ ಜಂಗಮಲಿಂಗವಾಗುತ್ತದೆ. ಆಗ ಸಾಧಕನು ಅನುಭಾವಿಯಾಗುತ್ತಾನೆ. ಯಾರೇ ಮುಟ್ಟಿದರೂ ಅವನಿಗೆ ಕೆಟ್ಟ ಪರಿಣಾಮಗಳು ಬೀರುವುದಿಲ್ಲ. ಈ ಚಕ್ರ ಜಾಗೃತಿಗಾಗಿ ಹನ್ನೆರಡು ಬಾರಿ 'ನಂ' ಬೀಜಾಕ್ಷರ ಮಂತ್ರ ಪಠಿಸಬೇಕು.


5.ವಿಶುದ್ಧಿ: ಹೀಗೆ ಅನಾಹತ ಚಕ್ರ ಜಾಗೃತವಾಗಿ ಆ ಶಕ್ತಿಯನ್ನು ಅನಾಹತದ ಮುಖಾಂತರ ಈಗ ವಿಶುದ್ದಿ ಚಕ್ರದ ಕಡೆ ಅಂದರೆ ಶರೀರದಲ್ಲಿರುವ ಗಂಟಲು ಚಕ್ರದ ಕಡೆ ಎತ್ತಬೇಕು. ಈ ಚಕ್ರವು ನಮ್ಮ ಗಂಟಲುದಲ್ಲಿದ್ದು, ಇದರ ಬಣ್ಣ ನೀಲಿಯಾಗಿದೆ. ಇದರ ಬೀಜಾಕ್ಷರ 'ಮಂ'ಕಾರವಾಗಿದ್ದು, 16 ದಳಗಳಿಂದ ಕೂಡಿದೆ. ಈ ವಿಶುದ್ಧಿ ಚಕ್ರ ಆಕಾಶ ತತ್ವವನ್ನು ಹೊಂದಿದ್ದು ಇದರ ಜಾಗೃತಿಯಿಂದ ಸಾಧಕನಲ್ಲಿ ಶುದ್ಧ ಸೌಂದರ್ಯ, ಸತ್ಯ ನಿರ್ಮಲತೆ ಉಂಟಾಗುತ್ತದೆ. ಸಂವಹನ, ವಾಕ್‌ಸಿದ್ಧಿ ಸಿದ್ಧಿಸುತ್ತದೆ ಮತ್ತು ಗಂಟಲು ಸಂಬಂಧಿಕಾಯಿಲೆಗಳು, ಹಾಗೂ ಶೀತ, ನೆಗಡಿ, ಶ್ರವಣ ಸಂಬಂಧಿಕಾಯಿಲೆಗಳು ದೂರವಾಗುತ್ತವೆ. ಇದು ಥೈರಾಯಿಡ್ ಗ್ರಂಥಿಯೊಂದಿಗೆ ಸಂಬಂಧ ಹೊಂದಿದೆ. ಜಗನ್ಮಾತೆ ಅಕ್ಕಮಹಾದೇವಿ ತಾಯಿಯವರು ಹೇಳುವಂತೆ,

ಷೋಡಶದಳ ಕಮಲದಲಿ ಆಡುವ ಲಿಂಗಕ್ಕೆ
ಗಾಢದ ಶ್ರೋತ್ರ ಮುಖಮಾಡಿ ॥ಶಬ್ದವ
ನೀಡಿ ಕೊಡುತಿಹನು ಪರಿಣಾಮಿ

ಈ ಚಕ್ರ ಜಾಗೃತಿಯಿಂದ ಪಂಚೇಂದ್ರಿಯಗಳಲ್ಲೊಂದಾದ ಕಿವಿಯು ವಿಷಯವಾಸನೆಯಾದ ಶಬ್ದ ತನ್ನ ಮೂಲಗುಣವನ್ನು ಕಳೆದುಕೊಂಡು ಸಾಧಕನು ಪ್ರಾಸಾದಲಿಂಗಿಯಾಗಿ ಪರಿಣಾಮಿ ಎನಿಸುತ್ತಾನೆ. ಈ ಚಕ್ರ ಜಾಗೃತಿಗಾಗಿ ಹದಿನಾರು ಬಾರಿ 'ಮಂ' ಬೀಜಾಕ್ಷರ ಮಂತ್ರ ಪಠಿಸಬೇಕು.

6.ಆಜ್ಞಾ: ಇನ್ನು ಆಜ್ಞಾ ಚಕ್ರ ವಿಶುದ್ಧಿ ಚಕ್ರದಿಂದ ಸಾಧಕನು ಶಕ್ತಿ ಊರ್ದ್ವಮುಖಗೊಳಿಸಿಕೊಂಡು ಆಜ್ಞಾ ಚಕ್ರದ ಕಡೆಗೆ ಸಾಗಬೇಕು. ಇದು ತುಂಬಾ ಮುಖ್ಯವಾಗಿರುವಂತಹದ್ದು, ಸಾಧಕನ ಜೀವನದಲ್ಲಿ ಇದು ಅರಿವಿನ ಕಣ್ಣನ್ನು ತೆರೆಸುವಂತಹದ್ದು ಇದಕ್ಕೆ ಮೂರನೆ ಕಣ್ಣು ಎಂದೂ ಕರೆಯುತ್ತಾರೆ. ಇದು ಲಲಾಟದ ಎರಡು ಹುಬ್ಬುಗಳ ಮದ್ಯದಲ್ಲಿ ಇರುವಂತಹದ್ದು. ಇಡಾ, ಪಿಂಗಳಾ, ಸುಷುಮ್ನ, ನಾಡಿಗಳ ಮಿಲನದಿಂದ ಕೂಡಿದ್ದು, ಶ್ವೇತ ಬಣ್ಣವನ್ನು ಹೊಂದಿದೆ. 'ಓಂ'ಕಾರ ಬೀಜಾಕ್ಷರವು ಇದರ ಮಂತ್ರವಾಗಿದೆ. ಇದು ಎರಡು ದಳದಿಂದ ಕೂಡಿದೆ. ಈ ಚಕ್ರ ಜಾಗೃತಿಯಿಂದ ಹಾರ್ಮೋನುಗಳ ಬಿಡುಗಡೆ-ಯಾಗಿ ಸಾಧಕನಲ್ಲಿ ಸಂಕಲ್ಪಸಿದ್ಧಿಯು ಪ್ರಾಪ್ತಿಯಾಗುತ್ತದೆ. ಹಾಗೆಯೇ ದಿವ್ಯಶಕ್ತಿ, ಜ್ಞಾನಶಕ್ತಿ ಉದಯವಾಗುತ್ತದೆ. ಇದರಿಂದ ತಲೆನೋವು, ರಾತ್ರಿ ಕುರುಡುತನ ಇತ್ಯಾದಿ ಕಾಯಿಲೆಗಳು ದೂರವಾಗುತ್ತವೆ.

ಮುಂದುವರಿಯುವುದು...



ಸಮಸ್ಯೆ......? ಸಮಾಧಾನ.....!

ನವೀನ ಕುಮಾರ,
ಬೆಂಗಳೂರು

ಲಿಂಗಾಯತ ಧರ್ಮ, ಬಸವ ಧರ್ಮ, ಶರಣ ಧರ್ಮ, ವಚನ ಧರ್ಮದಲ್ಲಿ ಯಂತ್ರ, ತಾಯಾತಾ, ಕರೀದಾರ ಕಟ್ಟುವುದು, ಲಿಂಬೆಹಣ್ಣು(ಕಾಯಿ) ಮಂತ್ರಿಸಿ ಕೊಡುವುದು, ತೆಂಗಿನಕಾಯಿ ಕೊಡುವುದು, ಅಂಗಾರ ಕೊಡುವುದು ಆಚರಣೆಗಳು ಇವೆಯೇ?. ಯಾವ ಪೂಜೆ ಮಾಡಬೇಕು ಯಾವುದು ಯೋಗ್ಯವೆಂಬುದನ್ನು ನಮಗೆ ಖಚಿತ ಪಡಿಸಿರಿ.

ಲಿಂಗಾಯತ ಧರ್ಮದಲ್ಲಿ ಗುರುಗಳಾದವರು ನಮ್ಮ ಧರ್ಮದ ಲಾಂಛನಗಳಾದ ವಿಭೂತಿ, ರುದ್ರಾಕ್ಷಿ, ಲಿಂಗಧಾರಣೆ ಮಾಡುವುದನ್ನು ಬಿಟ್ಟು ಬೇರೆ ವಸ್ತುಗಳನ್ನು ಕೊಡುವುದಾಗಲಿ ಕಟ್ಟುವುದಾಗಲಿ ನಿಷಿದ್ಧ. ಅಷ್ಟಾವರಣವೇ ಅಂಗವಾಗಬೇಕಂತಾ ಬಸವಾದಿ ಶರಣರ ಕಟ್ಟಪ್ಪಣೆ. ಲೌಕಿಕದಲ್ಲಿ ಪತಿವ್ರತೆಯಾದವಳು ಗಂಡನ ಕುರುಹಾದ ತಾಳಿಯೊಂದನ್ನು ಮಾತ್ರ ಕಟ್ಟಿಕೊಳ್ಳಬೇಕೇ ವಿನಃ ಬೇರೆ ಯಾವುದನ್ನು ಕಟ್ಟಿಕೊಳ್ಳಬಾರದು. ಅದರಂತೆ ಏಕದೇವ ನಿಷ್ಠೆಯ ಭಕ್ತಿಯನ್ನು ಪ್ರತಿಪಾದಿಸುವ ಧರ್ಮವಾದ ಲಿಂಗಾಯತರು ಅನ್ಯ ಮಣಿಮಾಲೆ ಯಂತ್ರ, ತಾಯತಾ, ಕರಿದಾರ ಕಟ್ಟಿಕೊಳ್ಳಬಾರದು. ಯಾರೂ ಕಟ್ಟಲೂಬಾರದು. ಇದನ್ನು ಯಾರು ಮಾಡುತ್ತಾರೆಯೋ ಅವರಿಗೆ ಧರ್ಮದ ಬಗ್ಗೆ ಏ.ಬಿ.ಸಿ.ಡಿ. ಗೊತ್ತಿಲ್ಲವೆಂದೇ ಭಾವಿಸಬೇಕು.

ಇವೆಲ್ಲವೂ ಭಯವನ್ನು ಹುಟ್ಟಿಸುತ್ತವೆ. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಏನ್ರಿ ನೀವು ಹೇಳುತ್ತೀರಿ ಆಗಾದರೆ ಊರುಗಳಲ್ಲಿ ಹಿರಿಯರು ಮಾಡುವುದು ತಪ್ಪಾ? ಅಂತಾ ಕೆಲವರು ಪ್ರಶ್ನಿಸುತ್ತಾರೆ, ಇದಕ್ಕೆ ಉತ್ತರ ನೋಡಿ.

"ಅಜಕೋಟಿಕಲ್ಪ ವರುಷದವರೆಲ್ಲರೂ ಹಿರಿಯರೆ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ? ನಡಮುರಿದು ಗುಡಗೂರಿ ತಲೆ ನಡುಗಿ ನೆರೆತೆರೆ ಹೆಚ್ಚಿ ಒಂದನಾಡ ಹೋಗಿ ಒಂಭತ್ತ ನಾಡುವ ಅಜ್ಞಾನಿಗಳೆಲ್ಲ ಹಿರಿಯರೆ? ಅನುವನರಿದು ಘನವ ಬೆರೆದು ಹಿರಿದು ಕಿರಿದೆಂಬ ಭೇದವಡಗಿ ಕೂಡಲಚನ್ನಸಂಗಯ್ಯನಲ್ಲಿ ಹಿರಿಯತನ ನಮ್ಮ ಮಹಾದೇವಿಯಕ್ಕಾಗಾಯಿತ್ತು"

ಎಂದು ಚನ್ನಬಸವಣ್ಣನವರು ಯಾರು ಹಿರಿಯರು ಎಂಬುದನ್ನು ಖಚಿತಪಡಿಸುತ್ತಾರೆ.

ಯಾವ ಪೂಜೆ ಮಾಡಬೇಕು ಎಂಬ ಪ್ರಶ್ನೆಗೆ...ಮನೆಯ ಪರುಷಕಟ್ಟಿ (ಜಗುಲಿಯ ಮೇಲೆ) ಗುರು ಬಸವಣ್ಣನವರ ಮೂರ್ತಿ, ಭಾವ ಚಿತ್ರ ಮಾತ್ರ ಪೂಜೆಗೆ ಯೋಗ್ಯ ಹಾಗೂ ಇಷ್ಟಲಿಂಗ ಪೂಜೆ ಮಾಡಬೇಕು. ಸಮಯ ಒದಗಿ ಬಂದಾಗ ಜಂಗಮ ಪೂಜೆ ಕೈಕೊಳ್ಳಬೇಕು. ಇದು ಲಿಂಗಾಯತರಿಗೆ. ಕಟ್ಟಪ್ಪಣೆ...

***** ಓದುಗರಿಗೆ ವಿಶೇಷ ಸೂಚನೆ *****

ಶರಣ ಬಂಧುಗಳೆ ನೀವು ಯಾವುದಾದರೂ ಸಮಸ್ಯೆಯಿಂದ ಬಳಲುತ್ತಿದ್ದರೆ ನಿಮ್ಮ ಸಮಸ್ಯೆಯನ್ನು ಪತ್ರದ ಮೂಲಕ ಅಥವಾ basavakumaraswamiji@gmail.com ಮೇಲ್‌ಗೆ ಕಳಿಸಬಹುದು. ಪೂಜ್ಯಶ್ರೀ ಮಾತಾಜಿಯವರು ಕಲ್ಯಾಣ ಕಿರಣದಲ್ಲಿ ಪರಿಹಾರ ತಿಳಿಸುತ್ತಾರೆ.



ಪುರಾಣಗಳ ಪ್ರಪಂಚ



ಕರಿಯ ಮತ್ತು ಬಿಳಿಯ ನಾಯಿ

| ಮುನೀತ್ ಎಂ.ಜಿ.

ಒಂದು ಊರಿನಲ್ಲಿ ಎರಡು ನಾಯಿಗಳು ಇದ್ದವು. ಅವು ತಾವು ಒಳ್ಳೆಯ ಗೆಳೆಯರೆಂದು ಅಂದುಕೊಂಡಿದ್ದವು. ಒಂದು ಬಿಳಿ ಬಣ್ಣದ್ದು ಬಿಳಿಯ, ಇನ್ನೊಂದು ಕಪ್ಪು ಬಣ್ಣದ ಕರಿಯ. ಒಂದು ದಿನ ಕರಿಯ ಮತ್ತು ಬಿಳಿಯ ಎರಡೂ ಸೇರಿ ಊರ ಹೊರತನಕ ಬಂದು ಬಿಟ್ಟವು. ಚೆಂದವಾಗಿ ಆಟವಾಡುತ್ತಾ ಮೈಮರೆತಿದ್ದವು.

ಆಗ ಹತ್ತಿರದ ಪೊದೆಯಲ್ಲಿ ಸದ್ದಾಗಿ ಅವುಗಳಲ್ಲಿನ ಬೇಟೆಗಾರ ಜಾಗ್ರತನಾದ. ಒಮ್ಮೆಲೇ ಪೊದೆಯತ್ತ ದಾಳಿ ಮಾಡಿದರೆ ಸಿಕ್ಕಿತೊಂದು ಕಾಡುಕೋಳಿ. ಒಂದೇ ಹಕ್ಕಿ ಎರಡೂ ನಾಯಿಗಳ ಬಾಯಿಯಲ್ಲಿ. ಅದು ತನ್ನ ಬೇಟೆ ಎಂದು ಎರಡೂ ಕಿತ್ತಾಡುತ್ತಿದ್ದಾಗ ನಡುವೆ ಬಂತೊಂದು ಚಿರತೆ! ಇವುಗಳು ಕುಂಯ್ ಕುಂಯ್ ಎಂದು ದೂರ ಓಡಿ ಹೋಗಲು ಕೋಳಿ ಚಿರತೆಯ ಪಾಲಾಯ್ತು. ಹೀಗಾಗಲು ನೀನೇ ಕಾರಣ ಅಂತ ಒಂದಕ್ಕೊಂದು ದೋಷಾರೋಪಣೆ ಮಾಡಿ ಇನ್ನೂ ಮೇಲೆ ಬೇಟೆಯನ್ನು ಜಗಳಾಡದೆ ಹಂಚಿಕೊಂಡು ತಿನ್ನೋಣ ಎಂದು ಒಪ್ಪಂದ ಮಾಡಿ ಕೊಂಡವು. ಮತ್ತೆ ಗೆಳೆತನದಾಟ ಮುಂದುವರೆದಿದ್ದಾಗ ಎದುರಿಂದ ಹಾದು ಹೋಗಿತ್ತೊಂದು ಮೊಲ. ಎರಡೂ ನಾಯಿಗಳು ಸೇರಿ ಆಕ್ರಮಣ ಮಾಡಲು ಮೊಲ ತಪ್ಪಿಸಿಕೊಳ್ಳುವುದುಂಟೆ? ಅವುಗಳ ಬಾಯಿಗೆ ಸಿಕ್ಕಿ ಸತ್ತೇ ಹೋಯಿತು. ಮತ್ತೆ ಬೇಟೆ ನನ್ನದು ತನ್ನದು ಎಂದು ಯುದ್ಧ ಆರಂಭ ಮಾಡಿದವು. ಇತ್ತ ಕಳ್ಳ ನರಿಯೊಂದು ಬಂದು ಸತ್ತ ಮೊಲವನ್ನು ಎತ್ತಿಕೊಂಡು ಸದ್ದಿಲ್ಲದೆ ನಡಿಯಿತು.

ಕೊನೆಗೆ ಸುಸ್ತಾಗಿ ನಾಯಿಗಳು ಕದನದಲ್ಲಿ ಬಳಲಿ ಇಬ್ಬರೂ ಮೊಲವನ್ನು ಎಳೆಯೋಣ ಆಗ ನಿನಗೆ ಸಿಕ್ಕಿದ್ದು ನಿನಗೆ, ನನ್ನಡೆ ಉಳಿದದ್ದು ನನಗೆ ಎಂದು ಮರು ಒಪ್ಪಂದ ಮಾಡಿಕೊಂಡು ಏದುಸಿರು ಬಿಡುತ್ತಾ ಬಂದು ನೋಡಿದರೆ ಅಲ್ಲೇನಿದೆ?, ನರಿ ಮೊಲವನ್ನು ಆಗಲೇ ಎತ್ತು ಕೊಂಡು ಹೋಗಿತ್ತು.

ಆಗ ನಿರಾಶೆಯಿಂದ ಏಕೆ ಈ ದಿನ ಹೀಗಾಯ್ತು ? ಯೋಚಿಸುತ್ತಾ ಕುಳಿತಿದ್ದಾಗ, ಎದುರಿನಿಂದ ಒಬ್ಬ ಸನ್ಯಾಸಿ ಬಂದ. ಅವನ ಬಳಿ ನಡೆದಿದ್ದಿದ್ದನ್ನೆಲ್ಲಾ ಹೇಳಿಕೊಂಡವು. ಅದಕ್ಕೆ ಸನ್ಯಾಸಿ ಹೇಳಿದ ನಿಮ್ಮಲ್ಲಿ ಹಂಚಿ ತಿನ್ನುವ ಗುಣವೇ ಇಲ್ಲ. ಒಂದು ನಿರ್ಧಾರದ ಮನಸ್ಸು ಇಲ್ಲ. ಮೊದಲು ಹಂಚಿಕೊಂಡು ತಿನ್ನುವುದನ್ನು ಕಲಿಯಿರಿ ಎಂದು ಹೇಳಿಹೋದ. ಎರಡು ಬೇಟೆ ಕಳೆದುಕೊಂಡ ಬೇಸರದಲ್ಲಿ ಇನ್ನು ಮುಂದೆ ಏನು ಸಿಕ್ಕರೂ ಹಂಚಿಕೊಂಡು ತಿನ್ನೋಣ ಎಂದು ಮೈಮೇಲಿನ ಗಾಯಗಳನ್ನು ನೆಕ್ಕಿಕೊಳ್ಳುತ್ತಾ ಮನೆ ಕಡೆ ಹೆಜ್ಜೆ ಹಾಕಿದವು.

ನೀತಿ: ಹಂಚಿ ತಿನ್ನುವ ಮನಸ್ಸು ಇರಬೇಕು. ಎಲ್ಲಾ ನನಗೆ ಬೇಕು ಅನ್ನಬಾರದು.

ಆತಂಕದ ಖಾಯಿಲೆ GAD

| ಪುನೀತ್ ಎಂ.ಜಿ.

ಮೂಲಲೇಖನ : ಶಲಿಕರ್ ಪಾಟೀಲ್

ಗ್ಯಾಡ್ ಎಂದರೇನು?

ಸಾಮಾನ್ಯವಾಗಿ ನಾವೆಲ್ಲರೂ ಯಾವುದೇ ಪರೀಕ್ಷೆ, ಸಂದರ್ಶನಕ್ಕೂ ಮೊದಲು ಆತಂಕಪಡುತ್ತೇವೆ, ನಮ್ಮ ಹಣಕಾಸಿನ ಪರಿಸ್ಥಿತಿಯ ಕುರಿತು ಚಿಂತಿಸುತ್ತೇವೆ ಅಥವಾ ಕೆಲಸದ ಗಡುವಿನಿಂದ ಒತ್ತಡಕ್ಕೆ ಒಳಗಾಗುತ್ತೇವೆ. ನಿತ್ಯಜೀವನದಲ್ಲಿ ನಾವು ಅನುಭವಿಸುವ ಇಂಥ ಆತಂಕಗಳು ಸ್ವಾಭಾವಿಕ. ನಿಜವಾಗಿ ಹೇಳಬೇಕೆಂದರೆ, ಇಂತಹ ಸ್ಥಿತಿ ನಮ್ಮನ್ನು ಉತ್ತಮವಾಗಿ ಕಾರ್ಯನಿರ್ವಸುವಂತೆ ಮಾಡುವಲ್ಲಿ ನೆರವಾಗುತ್ತದೆ.

ಸಾಮಾನ್ಯ ಆತಂಕದ ಖಾಯಿಲೆಯಿಂದ (GAD), ಬಳಲುತ್ತಿರುವ ವ್ಯಕ್ತಿಗೆ ಬಹುತೇಕ ಸಾರಿ ತನ್ನ ಆತಂಕವು ಅನವಶ್ಯಕವಾಗಿದೆ ಎಂಬುದು ತಿಳಿದಿರುತ್ತದೆಯಾದರೂ, ದೀರ್ಘಕಾಲದವರೆಗೆ, ವಿನಾಕಾರಣ, ಹೆಚ್ಚಿನದಾಗಿ ಚಿಂತೆ ಅಥವಾ ಆತಂಕಕ್ಕೆ ಒಳಗಾದವನಂತೆ ಕಾಣುತ್ತಾನೆ. ಅಂತಹವರಲ್ಲಿ ಈ ಭಾವನೆಗಳ ನಿಯಂತ್ರಣ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ದೈನಂದಿನ ಕೆಲಸವನ್ನು ಪೂರೈಸಬೇಕೆಂಬ ಯೋಚನೆ ಕೂಡಾ ಅಂತವರನ್ನು ಆತಂಕಕ್ಕೆ ತಳ್ಳಬಹುದು.



ಗ್ಯಾಡ್‌ನ ಲಕ್ಷಣಗಳೇನು?

ಇತರೆ ಆತಂಕದ ಖಾಯಿಲೆಗಳಲ್ಲಿರುವಂತೆ ಗ್ಯಾಡ್‌ನ ಗುಣಲಕ್ಷಣಗಳು ಇರುತ್ತವೆ. ಬಹುತೇಕವಾಗಿ ಸಾಮಾನ್ಯವಾಗಿರುವ ಲಕ್ಷಣಗಳೆಂದರೆ

ನಡುವಳಿಕೆಯಲ್ಲಿ ಕಂಡುಬರುವ ಲಕ್ಷಣಗಳು: ವ್ಯಕ್ತಿ ಕಿರಿಕಿರಿಗೊಳ್ಳುವುದು, ಸುಲಭವಾಗಿ ಬೆಚ್ಚಿ ಬೀಳುವುದು ಮತ್ತು ಏಕಾಗ್ರತೆಗೆ ಪರದಾಡುವುದು.


ದೈಹಿಕ ಲಕ್ಷಣಗಳು: ನಿಶ್ಯಕ್ತಿ, ಹೊಟ್ಟೆ ತೊಳೆಸುವಿಕೆ, ತಲೆ ಮತ್ತು ದೇಹದ ನೋವು, ಬೆವರು, ಉಸಿರಾಟದ ತೊಂದರೆ ಹಾಗೂ ತಲೆತಿರುಗುವಿಕೆ ಮುಂತಾದ ದೈಹಿಕ ತೊಂದರೆಗಳು ಕಂಡುಬರುತ್ತವೆ.

ನಿಮಗೆ ಪರಿಚಯವಿರುವ ಯಾವುದೇ ವ್ಯಕ್ತಿಗಳಲ್ಲಿ ಈ ರೀತಿಯ ಲಕ್ಷಣಗಳು ಕಂಡುಬಂದಲ್ಲಿ, ನೀವು ಅವರೊಂದಿಗೆ ಮಾತನಾಡಿ ವೃತ್ತಿಪರರ ಸಹಾಯ ಪಡೆಯುವಂತೆ ತಿಳಿಹೇಳಲು ಪ್ರಯತ್ನಿಸಬೇಕು.

ಕಾರಣಗಳೇನು?

ಇತರ ಹಲವು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಂತೆಯೇ ಈ ಖಾಯಿಲೆಯ ನಿರ್ದಿಷ್ಟ ಕಾರಣ ತಿಳಿದಿಲ್ಲ. ಮೆದುಳಿನ ಮತ್ತು ನರವ್ಯೂಹದ ಭಾಗಗಳು ಭಯ ಅಥವಾ ಆತಂಕ ಸೃಷ್ಟಿಯಲ್ಲಿ ಪಾತ್ರ ವಹಿಸುತ್ತದೆ ಎಂಬುದು ಸಂಶೋಧನೆಗಳಿಂದ ತಿಳಿದುಬಂದಿದೆ. ಕೆಲ ವೇಳೆ, ರೋಗಿ ಮಾನಸಿಕ ಅನಾರೋಗ್ಯದಿಂದ ಬಳಲುತ್ತಿದ್ದರೆ

ಅವರ ಮಕ್ಕಳಲ್ಲಿ ಆತಂಕದ ಖಾಯಿಲೆ ಕಾಣಿಸಿಕೊಳ್ಳುವ ಸಾಧ್ಯತೆಯಿರುತ್ತದೆ. ಮನೋಸಾಮಾಜಿಕ ಅಂಶಗಳಾದ ದೈನಂದಿನ ಒತ್ತಡ, ಕೆಲಸದ ಒತ್ತಡ, ಹಣಕಾಸಿನ ಸಮಸ್ಯೆಗಳು ಇತ್ಯಾದಿಗಳು. ಗ್ಯಾಡ್‌ಗೆ ಕಾರಣವಾಗಬಹುದು.



ಚಿಕಿತ್ಸೆ:

ಈ ಖಾಯಿಲೆಯಿಂದ ವ್ಯಕ್ತಿಯೊಬ್ಬನಿಗೆ ಸಾಕಷ್ಟು ಆಯಾಸವಾಗಬಹುದು. ಆದರೆ ಇದನ್ನು ಚಿಕಿತ್ಸೆಗೊಳಪಡಿಸಬಹುದು. ಈ ಆತಂಕ ಸಮಸ್ಯೆಗೆ ಔಷಧ ಅಥವಾ ಮಾನಸಿಕ ಚಿಕಿತ್ಸೆ ಅಥವಾ ಇವೆರೆಡರ ಸಮ್ಮಿಶ್ರಣದ ಚಿಕಿತ್ಸೆಯನ್ನು ನೀಡಲಾಗುತ್ತದೆ. ಕಾಗ್ನಿಟಿವ್ ಬಿಹೇವಿಯರಲ್ ಥೆರಪಿ (ಸಿಬಿಟಿ), ಗ್ಯಾಡ್‌ಗೆ ವಿಶೇಷವಾಗಿ ಪರಿಣಾಮಕಾರಿಯಾಗಿರುವ ಚಿಕಿತ್ಸೆ ಎಂದು ಸಾಬೀತಾಗಿದೆ. ಆತಂಕದಿಂದ ಉಂಟಾಗುವ ಮನೋವೇದನೆಗಳನ್ನು ಶಮನಗೊಳಿಸಲು ಔಷಧಗಳು ಸಹಾಯ ಮಾಡುತ್ತವೆ.

ಗ್ಯಾಡ್‌ನಿಂದ ಬಳಲುತ್ತಿರುವವರ ಆರೈಕೆ

ಯಾರಾದರು ಗ್ಯಾಡ್‌ನ ಗುಣಲಕ್ಷಣ ಹೊಂದಿದ್ದರೆ ಅವರ ಚೇತರಿಕೆಗೆ ಸಹಾಯ ಮಾಡುವಲ್ಲಿ ನೀವು ಪ್ರಮುಖ ಪಾತ್ರ ವಹಿಸಬಹುದು. ಮೊಟ್ಟಮೊದಲು, ನೀವು ಈ ಖಾಯಿಲೆ ಕುರಿತು ತಿಳಿದುಕೊಳ್ಳಬೇಕು. ಆಗ ಮಾತ್ರ ವ್ಯಕ್ತಿಯ ಸಮಸ್ಯೆಯನ್ನು ಅರ್ಥೈಸಿಕೊಳ್ಳಲು ಸಾಧ್ಯ. ಅವರಿಗೆ ವೃತ್ತಿಪರ ಸಹಾಯ ಪಡೆಯಲು ಉತ್ತೇಜಿಸಿ. ಚಿಕಿತ್ಸೆಯ ಪರಿಣಾಮದ ಕುರಿತು ಅವರಿಗೆ ತಿಳಿಹೇಳಿ. ವೈದ್ಯರನ್ನು ಭೇಟಿಮಾಡುವ ಸಂದರ್ಭದಲ್ಲಿ ಅವರೊಂದಿಗೆ ನೀವೂ ಹೋಗಿ.

ನಿಮ್ಮನ್ನು ನೀವೇ ನೋಡಿಕೊಳ್ಳಿ

ಗ್ಯಾಡ್ ಸಮಸ್ಯೆಯನ್ನು ನಿಭಾಯಿಸಲು ಹಲವು ಸ್ವಯಂ ತಂತ್ರಗಳಿವೆಯಾದರೂ, ರೋಗಪತ್ತೆ, ಅದಕ್ಕನುಗುಣವಾದ ಚಿಕಿತ್ಸೆ ಮತ್ತು ಔಷಧದ ಯೋಜನೆಗಾಗಿ ನೀವು ಮೊದಲು ಮನೋವೈದ್ಯರನ್ನು ಸಂಪರ್ಕಿಸಬೇಕು. ಚಿಕಿತ್ಸೆಯೊಂದಿಗೆ ಸ್ವಯಂ ತಂತ್ರಗಳನ್ನು ಅನುಸರಿಸಬಹುದೇ ವಿನಃ ಸ್ವಯಂ ತಂತ್ರಗಳೇ ಚಿಕಿತ್ಸೆಗೆ ಪರ್ಯಾಯ ಮಾರ್ಗ ಅಲ್ಲ ಎಂಬುದನ್ನು ತಿಳಿದಿರಬೇಕು. ಧ್ಯಾನ ಮತ್ತು ವಿಶ್ರಾಂತಿಯಂತಹ ತಂತ್ರಗಳು ಆತಂಕದಿಂದ ಮುಕ್ತಿ ಹೊಂದಲು ಪರಿಣಾಮಕಾರಿ ಮಾರ್ಗಗಳು. ಬಹುಕಾಲದವರೆಗೆ ಇವುಗಳನ್ನು ಅಭ್ಯಾಸ ಮಾಡುವುದರಿಂದ ಒಟ್ಟಾರೆ ಆತಂಕದ ಮಟ್ಟವನ್ನು ಕಡಿಮೆಗೊಳಿಸುವಲ್ಲಿ ನೆರವಿಗೆ ಬರುತ್ತವೆ. ಆರೋಗ್ಯಯುತ ಆಹಾರ ಸೇವನೆ, ನಿತ್ಯ ವ್ಯಾಯಾಮ ಮಾಡುವುದು, ಅಗತ್ಯದಷ್ಟು ನಿದ್ದೆ ಮುಂತಾಗಿ ನಿಮ್ಮ ಜೀವನಶೈಲಿಯಲ್ಲಿ ಸುಧಾರಣೆ ಮಾಡಿಕೊಳ್ಳುವುದರಿಂದ ನಿಮ್ಮಲ್ಲಿ ಸಕಾರಾತ್ಮಕ ಪರಿಣಾಮವನ್ನು ಉಂಟುಮಾಡಬಹುದು.



111 ಅಡಿ ಎತ್ತರದ ಬಸವ ಪುತ್ಥಳಿ

ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ

ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20 ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಆದ್ದರಿಂದ 111 ಅಡಿ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಗಿದೆ. ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ-ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು.

ಪೀಠದ ಕೆಳಭಾಗದಲ್ಲಿ ಒಂದು ಧ್ಯಾನ ಮಂಟಪವನ್ನು ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು- ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಗವಿಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ.

ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

ಪೂಜ್ಯ ಶ್ರೀ ಜಗದ್ಗುರು ಡಾ.ಮಾತೆ ಮಹಾದೇವಿ ಬಸವ ಮಂಟಪ ರಾಜಾಜಿನಗರ, ಬೆಂಗಳೂರು-560 010. 9448137508, 9449588669

Registered with Registrar oF News Papers in India, New Delhi No.19988/70 Postal Registration (SSP os BG-West Dn) No.KA/BGW-50/WPP-17/2015-17, Linced to Post

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ



15 ನೇ ಕಲ್ಯಾಣ ಪರ್ವ

2016 ಅಕ್ಟೋಬರ್ 14, 15 ಮತ್ತು 16 ರಂದು



ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

"ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೇ ಇಸವಿಯಿಂದಲೂ ಕಲ್ಯಾಣಪರ್ವ ನಡೆಸಲಾಗುತ್ತಿದೆ.

★★★ ಕಾರ್ಯಕ್ರಮ ವಿವರ ★★★

★ ಮಾತೃ (ಶುಕ್ರ)ವಾರ, 14ರಂದು ಬೆಳಗ್ಗೆ 10-30ಕ್ಕೆ ಉದ್ಘಾಟನೆ, ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30 ರಿಂದ 5-30 ರಾಷ್ಟ್ರೀಯ ಬಸವ ದಳ ಸಮಾವೇಶ; ಸಂಜೆ 6-30 ರಿಂದ ಚಿಂತನಗೋಷ್ಠಿ.

★ 15 ಶರಣ(ಶನಿ)ವಾರದಂದು ಬೆಳಗ್ಗೆ 7-30ಕ್ಕೆ ಶರಣ ವಂದನೆ, 10-30ಕ್ಕೆ ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30 ರಿಂದ 5-30 ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ ಚಿಂತನಗೋಷ್ಠಿ,

★ 16 ದೇವ(ಭಾನು)ವಾರದಂದು ಅಕ್ಕನಾಗಲಾಂಬಿಕೆಯ ಸಂಸ್ಮರಣೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ. ನಂತರ ಅಲ್ಲಮಪ್ರಭು ಶೂನ್ಯ ಪೀಠಾರೋಹಣ.

ಕಲ್ಯಾಣ(ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಭವ್ಯವಾದ ಸಭಾಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು. ಶರಣ ಬಂಧುಗಳು 1 ಹೊತ್ತಿನ ಪ್ರಸಾದ ದಾಸೋಹದ ವೆಚ್ಚ ಭರಿಸಲೂ ಅವಕಾಶ ಉಂಟು.

* ಮಹಾಪೋಷಕರು 15 ಸಾವಿರ ರೂ. ಮತ್ತು ಮೇಲೆ ಕೊಟ್ಟವರು.* ಪೋಷಕರು 10 ಸಾವಿರ ರೂ. ಮತ್ತು ಮೇಲ್ಪಟ್ಟು, * ದಾನಿಗಳು 5 ಸಾವಿರ ರೂ. ಮೇಲ್ಪಟ್ಟು, * ಹಿತೈಷಿಗಳು 3 ಸಾವಿರ ರೂ., * ಸ್ವಾಗತ ಸಮಿತಿ ಸದಸ್ಯತ್ವ 1 ಸಾವಿರ ರೂ., * ಪ್ರತಿನಿಧಿ ಶುಲ್ಕ 250 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿ ಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 15/20 ಸಾವಿರ ರೂಪಾಯಿ ಮುದುವಟ್ಟು (ಠೇ.ಅ) ಇಡಲು ದೇಣಿಗೆ ನೀಡಿದರೆ, ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ. 80ಜಿ ರಿಯಾಯಿತ ಸೌಲಭ್ಯವೂ ಇದೆ.

ಸಂಪರ್ಕಿಸುವ ವಿಳಾಸ

ಪೂಜ್ಯ ಶ್ರೀ ಮಹಾಜಗದ್ಗುರು ಡಾ.ಮಾತೆ ಮಹಾದೇವಿ, ಬಸವ ಧರ್ಮ ಪೀಠ(ರಿ.) ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010. ಫೋ:

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ ಬಸವ ಮಹಾಮನೆ, ಬಸವ ಕಲ್ಯಾಣ-585 327